## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## **ಅಪೀಲು ಸ್ಥಾಯಿ ಸಮಿತಿಯ ದಿನಾಂಕ:25-10-2013ರಂದು ನಡೆದ ಸಭೆಯ ನಡವಳಿಗಳು**

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | **ಚಂದ್ರಶೇಖರಯ್ಯ.ಆರ್** | ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 02 | **ಮೋಹನ್‌ಕುಮಾರ್** | ಸದಸ್ಯರು | ವಿಶೇಷ ಅಧಿಕಾರಿ |
| 03 | **ರಾಜೇಶ್ವರಿ.ಹೆಚ್.ಎನ್** | ಸದಸ್ಯರು | ಉಪ ಆರೋಗ್ಯಾಧಿಕಾರಿ(ಗಾಂಧಿನಗರ) |
| 04 | **ಶಕುಂತಲ.ಎನ್** | ಸದಸ್ಯರು | ಆರೋಗ್ಯ ವೈದ್ಯಾಧಿಕಾರಿ (ಶಾಂತಿನಗರ) |
| 05 | **ಆಂಜನಪ್ಪ.ರ** | ಸದಸ್ಯರು | ಸಹಾಯಕಕಂದಾಯ ಅಧಿಕಾರಿಗಳು ಕೆಂಪೇಗೌಡ ನಗರ/ದಕ್ಷಿಣಮಾರುಕಟ್ಟೆ/ದಾಸರಹಳ್ಳಿ |
| 06 | **ಮಂಜುಳಾದೇವಿ.ಆರ್** | ಸದಸ್ಯರು | ವ್ಯವಸ್ಥಾಪಕರು(ಜಾಹೀರಾತು) |
| 07 | **ಮುನಿರತ್ನಮ್ಮ** | ಸದಸ್ಯರು | ಹಿರಿಯ ಅರೋಗ್ಯ ಪರಿವೀಕ್ಷಕರು(ಶಾಂತಿನಗರ) |
| 08 | **ಓ.ಮಂಜುನಾಥ್** | ಸದಸ್ಯರು | |
| 09 | **ಶಿವರಾಜು.ಎಮ್** | ಸದಸ್ಯರು | |
| 10 | **ವಿಜಯನ್.ಎಸ್** | ಸದಸ್ಯರು | |
| 11 | **ನಾಜಿನಿ ಬೇಗಂ** | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**ವಿಷಯ:ಸಂಖ್ಯೆ:ಅಸ್ಥಾಸ/(ಕ)/20/2012–13:**ಜಂಟಿ ಆಯುಕ್ತರು(ಪೂರ್ವ)ರವರ ಟಿಪ್ಪಣಿ ದಿನಾಂಕ:22–11–2012ರ ರೀತ್ಯಾ ಶ್ರೀ. ಸಂಪತ್ ಕುಮಾರ್ ಜಿ.ಪಿ.ಎ. ಹೋಲ್ಡರ್ ಆಫ್ ಶ್ರೀಮತಿ.ಪಿ.ಮೇರಿ ವೇರೊನಿಕಾ ಇವರು ಸ್ವತ್ತಿನ ಸಂಖ್ಯೆ :405 ಆಸ್ಟಿನ್ ಟೌನ್ ವಾರ್ಡ್–114 ರ ಬಾಡಿಗೆ ಗುತ್ತಿಗೆ ವರ್ಗಾವಣೆ ಮಾಡಲು ದಿನಾಂಕ: 18/10/2007 ರಂದು ಅರ್ಜಿ ನೀಡಿರುತ್ತಾರೆ. ಸದರಿ ಸ್ವತ್ತು ನಗರ ಪಾಲಿಕೆಯಿಂದ ಶ್ರೀಮತಿ.ಜೆ.ಅನಸ್ಥೀಷಿಯಾ ರವರಿಗೆ ಹಂಚಿಕೆಯಾಗಿರುತ್ತದೆ.

ಸದರಿಯವರು ನಗರ ಪಾಲಿಕೆ ನೌಕರರಾಗಿದ್ದು ಸೇವೆಯಲ್ಲಿ ಇರುವಾಗಲೇ ದಿನಾಂಕ: 13–04–1967 ರಲ್ಲಿ ಮರಣ ಹೊಂದಿರುತ್ತಾರೆ. ಇವರಿಗೆ ಮೂರು ಮಕ್ಕಳಿರುತ್ತಾರೆ 1)MARY VERONICA, 2) LOUSIA ಮತ್ತು 3) EDWIN PUAL (ಮರಣ ಹೊಂದಿರುತ್ತಾರೆ.)ತಮ್ಮ ತಾಯಿ ಮರಣದ ಸಮಯದಲ್ಲಿ ಚಿಕ್ಕ ಮಕ್ಕಳಾಗಿರುತ್ತಾರೆ ಅವರ ತಂದೆಯಾದ PAUL ರವರೊಂದಿಗೆ ವಾಸವಾಗಿರುತ್ತಾರೆ ಈ ಮಧ್ಯದಲ್ಲಿ ಶ್ರೀ.PAUL ರವರು ದಿನಾಂಕ: 19–08–1967 ಬೇರೆಂದು ವಿವಾಹವಾಗಿರುತ್ತಾರೆ ಅವರ ಹೆಸರು ಕ್ಲಾರ ಜಸಂತಾ ಇವರಿಗೆ ಮೂರು ಜನ ಮಕ್ಕಳು ಜನಸಿದ್ದು ಎಲ್ಲಾ ಒಂದೇ ಕುಟುಂಬದಲ್ಲಿ ವಾಸವಾಗಿರುತ್ತಾರೆ ನಂತರ ಊಐ ರವರು ದಿನಾಂಕ: 30–01–02 ರಂದು ಮರಣ ಹೊಂದಿರುತ್ತಾರೆ.

ಈಗ ಎರಡನೇ ಹೆಂಡತಿಯಾದ ಕ್ಲಾರ ಜಸಂತಾ ರವರು ಸ್ವತ್ತಿನ ಕ್ರಯದ ಮೊತ್ತ ರೂ. 16175/– ಗಳನ್ನು ದಿನಾಂಕ: 14–11–2003ರಲ್ಲಿ ಪಾವತಿಸಿರುತ್ತರೆ. ಹಾಗೂ ಸದರಿಯವರು ದಿನಾಂಕ: 16–09–2004 ರಲ್ಲಿ ಸದರಿ ಸ್ವತ್ತಿನ ಬಾಡಿಗೆ ಗುತ್ತಿಗೆ ವರ್ಗಾವಣೆ ಮಾಡಿ ಕೊಡಲು ಕೋರಿರುತ್ತಾರೆ. ಈ ಬಗ್ಗೆ ಸ್ಥಳ ಪರಿಶೀಲಿಸಲಾಗಿ ಸದರಿ ಸ್ವತ್ತಿನಲ್ಲಿ PUAL ರವರ 2ನೇ ಹೆಂಡತಿ ಮತ್ತು ಮಕ್ಕಳು ವಾಸವಾಗಿರುತ್ತಾರೆ.

ಈ ಸಂಬಂಧ MARY VERONICA ಮತ್ತು ಜಿ.ಪಿ.ಎ. ಹೋಲ್ಡರ್ ಶ್ರೀ.ಸಂಪತ್ ಕುಮಾರ್ ರವರಿಗೆ ಜಂಟಿ ಆಯುಕ್ತರು (ಪೂರ್ವ) ರವರ ಆದೇಶ ದಿನಾಂಕ: 20–04–2011ರಂತೆ ಸಹ ಕಂದಾಯ ಅಧಿಕಾರಿ (ದೊಮ್ಮಲೂರು)

ಪಿಆರ್/21/07-08 ದಿನಾಂಕ: 23-06-2011 ರಂದು ಅಂತಿಮ ಹಿಂಬರಹ ನೀಡಿ ಈ ಕೆಳಕಂಡ ದಾಖಲೆಗಳನ್ನು ನೀಡಲು ತಿಳಿಸಿದೆ.

1. ವಂಶ ವೃಕ್ಷ
2. ನಿರಾಕ್ಷೇಪಣೆ ಪತ್ರಗಳು ಸಂಬಂಧ ಪಟ್ಟ ವಾರಸುದಾರರುಗಳಿಂದ (ಸಹೋದರಿ ಮತ್ತು ಇತರೆ ಕುಟುಂಬ ಸದಸ್ಯರಿಂದ)
3. ಸಹೋದರ ಮತ್ತು ಇತರೆ ಕುಟುಂಬ ವರ್ಗದವರ ಮರಣ ಪ್ರಮಾಣಪತ್ರವನ್ನು ಸಲ್ಲಿಸಲು ಹಿಂಬರಹ ನೀಡಲಾಗಿತ್ತು, ಸದರಿಯವರು ವಂಶ ವೃಕ್ಷ, ಮರಣ ಪ್ರಮಾಣ ಪತ್ರ ಮಾತ್ರ ನೀಡಿರುತ್ತಾರೆ, ಎರಡು ಹಿಂಬರಹ ನೀಡಿದ್ದರೂ ಸಹ ನಿರಾಕ್ಷೇಪಣಾ ಪತ್ರವನ್ನು ಸಲ್ಲಿಸಿರುವುದಿಲ್ಲ.

ಪ್ರಕರಣವನ್ನು ಕರೆಯಲಾಯಿತು ಮನವಿದಾರರು ಹಾಜರಿದ್ದು, ಸಹಾಯಕ ಕಂದಾಯ ಅಧಿಕಾರಿ(ದೊಮ್ಮಲೂರು) ಗೈರು ಹಾಜರಾಗಿರುತ್ತಾರೆ ಈ ಪ್ರಕರಣ ಕುರಿತಂತೆ ಕಂದಾಯ ಪರಿವೀಕ್ಷಕರಿಗೆ ಮಾಹಿತಿ ಇಲ್ಲದೆ ಪ್ರಕರಣವನ್ನು ಮುಂದೂಡಿದೆ.

**ವಿಷಯ:ಸಂಖ್ಯೆ:ಅಸ್ಥಾಸ/(ತೆ)/22/2012-13:** ಅಪರ ಆಯುಕ್ತರು(ದಕ್ಷಿಣ)ರವರ ಟಿಪ್ಪಣಿ ದಿನಾಂಕ:31-10-2012ರ ರೀತ್ಯಾ ಸ್ವತ್ತಿನ ಸಂಖ್ಯೆ:12 ವಯ್ಯಪುರಿ ಲೇನ್,ಆರ್ಮುಗಂ ಮೊದಲಿಯಾರ್ ಸ್ಟ್ರೀಟ್,ಕಲಾಸಿಪಾಳ್ಯಂ, ಬೆಂಗಳೂರು-02. ವಾರ್ಡ್-119ರ ಖಾತೆಯು ಆರ್. ಪದ್ಮನಾಭನ್‌ರವರ ಹೆಸರಿನಲ್ಲಿ ದಾಖಲಾಗಿದ್ದು, ಸ್ವತ್ತಿನ ಒಟ್ಟು ಅಳತೆ 1200 ಚದರಡಿ ವಾರ್ಷಿಕ ಮೌಲ್ಯ ರೂ.27216 ವಸತಿ,34560 ವಸತಿಯೇತರ ಮೇಲೆ ದಾಖಲಿಸಲ್ಪಟ್ಟಿದೆ,ಖಾತೆದಾರರು ಸ್ವತ್ತಿನಲ್ಲಿ ನೆಲಮಾಳಿಗೆ ಪಾರ್ಕಿಂಗ್ 1000 ಚದರಡಿ ಹಾಗೂ 1ನೇ,2ನೇ ಮತ್ತು 3ನೇ ಅಂತಸ್ತು ಒಟ್ಟು 3800 ಚದರಡಿಗಳ ಕಟ್ಟಡವಿದ್ದು ಸ್ವತ್ತಿಗೆ ಎಸ್.ಎ.ಎಸ್.ದರದಂತೆ ಸಾಮಾನ್ಯ ಪರಿಷ್ಕರಣೆ ಅಡಿಯಲ್ಲಿ ವಾರ್ಷಿಕ ಮೌಲ್ಯವನ್ನು 32704/- ವಸತಿಗಳಿಗೆ ಮತ್ತು 36500 ವಸತಿಯೇತರಗಳಿಗೆ ದಿನಾಂಕ:01-04-2008ರಿಂದ ಅನ್ವಯವಾಗುವಂತೆ ಪರಿಷ್ಕರಿಸಲಾಗಿರುತ್ತದೆ. ಕಂದಾಯ ನಿಗದಿ ಬಗ್ಗೆ ಪ್ರಥಮ ಅಪೀಲು ಅಧಿಕಾರಿಯವರಿಗೆ ಅಪೀಲು ಮನವಿ ಸಲ್ಲಿಸಿದ್ದರ ಮೇರೆಗೆ ಪ್ರಥಮ ಅಪೀಲು ಅಧಿಕಾರಿಯವರು ಸ್ವತ್ತಿನ ವಾರ್ಷಿಕ ಮೌಲ್ಯವನ್ನು ವಸತಿ ರೂ.32704/- ಗಳಿಂದ ರೂ.31360/-ಗಳಿಗೆ ಮತ್ತು ವಸತಿಯೇತರ ವಾರ್ಷಿಕ ಮೌಲ್ಯ ರೂ.36500/- ಗಳಿಂದ ರೂ.35000/- ಗಳಿಗೆ ನಿಗಧಿ ಪಡಿಸಿ ದಿನಾಂಕ:01-04-2008ರಿಂದ ಅನ್ವಯವಾಗುವಂತೆ ಕಡಿಮೆ ಮಾಡಿದ್ದು ವಿಶೇಷ ಸೂಚನಾಪತ್ರ ಜಾರಿಮಾಡಲಾಗಿರುತ್ತದೆ.

ಪ್ರಥಮ ಅಪೀಲು ಅಧಿಕಾರಿಯವರ ಆದೇಶದ ವಿಶೇಷ ಸೂಚನಾಪತ್ರ ಸ್ವೀಕರಿಸಿದ ಖಾತೆದಾರರು ಮನವಿ ಸಲ್ಲಿಸಿ ಸದರಿ ಕಟ್ಟಡವು ಸುಮಾರಿ 29 ವರ್ಷ ಹಳೆಯದ್ದಾಗಿದ್ದು ಕಟ್ಟಡದ ಅಳತೆ ಹಾಗೂ ಕಟ್ಟಡದ ವಯಸ್ಸು ಹಾಗೂ ಉಪಯೋಗಕ್ಕೆತಕ್ಕಂತೆ ಕಂದಾಯ ಕಡಿಮೆ ಮಾಡಲು ಕೋರಿರುತ್ತಾರೆ. ಅದುದರಿಂದ ಈ ಬಗ್ಗೆ ಸಮಿತಿಯ ಮುಂದಿನ ತೀರ್ಮಾನಕ್ಕಾಗಿ ಕಡತವನ್ನು ಟಿಪ್ಪಣಿಯೊಂದಿಗೆ ಮಂಡಿಸಲಾಗಿದೆ.

ಪ್ರಕರಣವನ್ನು ಕರೆಯಲಾಯಿತು ಮನವಿದಾರರು ಹಾಗೂ ಪ್ರತಿವಾದಿ ಶ್ರೀ.ಲಿಂಗಯ್ಯ ಸಹಾಯಕ ಕಂದಾಯ ಅಧಿಕಾರಿ (ಕೆಂಪೇಗೌಡನಗರ) ಇವರುಗಳು ಹಾಜರಿದ್ದು ಮನವಿದಾರರು ನಿಗಧಿ ಪಡಿಸಿರುವ ಕಂದಾಯವು ಸಮಂಜಸವಾಗಿರುವುದಿಲ್ಲ ಹಾಗೂ ಪ್ರತಿವಾದಿ ಇವರು ಪ್ರಥಮ ಅಪೀಲು ಅಧಿಕಾರಿಯವರು ಪರಿಹಾರ ನೀಡಿರುವುದಾಗಿ ತಿಳಿಸಿದ್ದು ಪ್ರಕರಣವನ್ನು ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ

**ವಿಷಯ:ಸಂಖ್ಯೆ:ಅಸ್ಥಾಸ/(ಮಾ)/25/2012-13** ಆಯುಕ್ತರು ರವರ ಟಿಪ್ಪಣಿ ಸಂಖ್ಯೆ:ಸಕಂಅ(ದ)(ಮಾ) ಪಿಆರ್.206/12-13 ದಿನಾಂಕ:30-1-2013ರ ರೀತ್ಯಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಯನಗರ ವಾಣಿಜ್ಯ ಸಂಕೀರ್ಣದಲ್ಲಿನ ಮೊದಲನೇ ಮಹಡಿಯಲ್ಲಿರುವ ತರಕಾರಿ ಮಾರುಕಟ್ಟೆಯ ಮೆಜನೈನ್ ಪ್ಲೋರ್ ಮಳಿಗೆ ಸಂಖ್ಯೆ. 3-4 ನ್ನು ಟೆಂಡರ್ ಕರೆದು ಶ್ರೀಮತಿ. ಡಿ.ವಿದ್ಯಾ ರವರಿಗೆ 2008 ನೇ ಫೆಬ್ರವರಿ ಮಾಹೆಯಲ್ಲಿ ಟೆಂಡರ್‌ನಲ್ಲಿ ಭಾಗವಹಿಸಿದ ಮೇರೆಗೆ ಷರತ್ತು ಮತ್ತು ನಿಬಂಧನೆಗಳನ್ವಯ ಹಂಚಿಕೆ ಮಾಡಲಾಗಿರುತ್ತದೆ. ಶ್ರೀಮತಿ. ಡಿ.ವಿದ್ಯಾ ರವರು ಜಯನಗರ ವಾಣಿಜ್ಯ ಸಂಕೀರ್ಣದಲ್ಲಿರುವ ತರಕಾರಿ ಮಾರುಕಟ್ಟೆಯ ಮೆಜನೈನ್ ಪ್ಲೋರ್‌ನಲ್ಲಿರುವ ಮಳಿಗೆ ಸಂಖ್ಯೆ. 3 ಮತ್ತು 4 ರ ಪರವಾನಗಿದಾರರು ಪರವಾನಗಿ ಶುಲ್ಕವನ್ನು ಕಡಿಮೆ ಮಾಡಿಕೊಡಬೇಕೆಂದು ಕೋರಿ ಅಧ್ಯಕ್ಷರು ಅಫೀಲು ಸ್ಥಾಯಿ ಸಮಿತಿಗೆ ದಿನಾಂಕ: 31-7-2012 ರಂದು ಮನವಿಯನ್ನು ಸಲ್ಲಿಸಿರುತ್ತಾರೆ.

ಮಾನ್ಯ ಅಧ್ಯಕ್ಷರು ಅಫೀಲುಗಳ ಸ್ಥಾಯಿ ಸಮಿತಿರವರ ಪತ್ರದ ಮೇರೆಗೆ ಪರಿಶೀಲಿಸಲಗಿ ಸದರಿ ಮಳಿಗೆಯನ್ನು ಟೆಂಡರ್ ಕರೆದು ಟೆಂಡರ್‌ನಲ್ಲಿ ಭಾಗವಹಿಸಿ ಶ್ರೀಮತಿ. ಡಿ.ವಿದ್ಯಾರವರು ಪರವಾನಗಿದಾರರಾಗಿರುತ್ತಾರೆ. ಪರವಾನಗಿ ಶುಲ್ಕ ರೂ. 10.950/- ಸೇವಾಶುಲ್ಕ ರೂ. 2190/- ಹಾಗೂ ಕೇಂದ್ರೀಯ ಸೇವಾಶುಲ್ಕ ರಊ. 1354/- ಒಟ್ಟು ಒಂದು ತಿಂಗಳ

ಪರವಾನಗಿ ಶುಲ್ಕ ರೂ. 14,494/- ಗಳಾಗಿದ್ದು, ಸದರಿ ಮಳಿಗೆಯು ಪಾಲಿಕೆಯಿಂದ 2008 ನೇ ಫೆಬ್ರವರಿ ಮಾಹೆಯಲ್ಲಿ ಮಂಜೂರಾಗಿರುತ್ತದೆ. ಸದರಿ ಮಳಿಗೆ ಮಂಜೂರಾದ ದಿವಸದಿಂದ ಇದುವರೆವಿಗೂ ಅಂದರೆ 31-01-2011 ರವರೆಗೆ ರೂ. 4,61,431/- ಗಳನ್ನು ಬಾಕಿ ಉಳಿಸಿಕೊಂಡಿದ್ದು, ಇದುವರೆವಿಗೂ ಕೆ.ಎಂ.ಸಿ. ಕಾಯ್ದೆ ಸಿಕ್ಷನ್ 470&370(2) ನೋಟೀಸುಗಳನ್ನು ನೀಡಿದ್ದರೂ ಸಹ ಪರವಾನಗಿ ಶುಲ್ಕ ಪಾವತಿ ಮಾಡಿರುವುದಿಲ್ಲ.

ಶ್ರೀಮತಿ. ಡಿ.ವಿದ್ಯಾ ರವರು ಪರವಾನಗಿ ಶುಲ್ಕವನ್ನು ಪಾವತಿಸದ ಕಾರಣ ದಿನಾಂಕ: 17-8-2011 ರಂದು ಬೀಗ ಮುದ್ರೆಯನ್ನು ಹಾಕುವಂತೆ ಮಾನ್ಯ ಆಯುಕ್ತರು ಆದೇಶಿಸಿದ್ದರ ಮೇರೆಗೆ ಮಳಿಗೆಗೆ ಬೀಗಮುದ್ರೆ ಹಾಕುವ ಹಿಂದಿನ ದಿವಸವೇ ಅಂದರೆ ದಿನಾಂಕ: 16-8-2011 ರಂದು ರೂ. 1,00,000/- ಗಳ ಡಿ.ಡಿ.ಯನ್ನು ಹಾಗೂ ಉಳಿದ ಮೊತ್ತ ರೂ. 4,12,000/- ಗಳಿಗೆ ಧನಾದೇಶವನ್ನು ನೀಡಿರುತ್ತಾರೆ. ಸದರಿ ರೂ. 4,12,000/- ಚೆಕ್ ಸಂಖ್ಯೆ. 785025 ರನ್ನು ದಿನಾಂಕ :17-9-2011 ರಂದು ಬ್ಯಾಂಕಿಗೆ ಜಮಾ ಮಾಡಲಾಗಿದ್ದು, ಸದರಿಯವರ ಖಾತೆಯಲ್ಲಿ ಹಣದ ಕೊರತೆ ಇರುವ ಕಾರಣ ಚೆಕ್ ತಿರಸ್ಕೃತಗೊಂಡು ಹಿಂದಿರುಗಿರುತ್ತದೆ. ಈ ಮೇರೆಗೆ ಪುನಃ ಪರವಾನಗಿದಾರರಾದ ಶ್ರೀಮತಿ.ಡಿ.ವಿದ್ಯಾ ರವರಿಗೆ ದಿನಾಂಕ: 21-9-2011 ರಂದು ತಿರಸ್ಕೃತಗೊಂಡಿರುವ ಚೆಕ್ಕಿನ ಮೊತ್ತವನ್ನು ಡಿಮ್ಯಾಂಡ್ ಡ್ರಾಫ್ಟ್ ಮುಖಾಂತರ ಕೂಡಲೇ ಈ ಕಛೇರಿಗೆ ಸಲ್ಲಿಸುವಂತೆ ತಿಳುವಳಿಕೆ ಪತ್ರವನ್ನು ಜಾರಿ ಮಾಡಲಾಗಿರುತ್ತದೆ.

ಆದಾಗ್ಯೂ ಸದರಿ ಪರವಾನಗಿದಾರರು ತಿಳುವಳಿಕೆ ಪತ್ರಕ್ಕೆ ಸ್ಪಂದಿಸದೆ ಬೇಜವಾಬ್ದಾರಿತನದಿಂದ ಯಾವುದೇ ಉತ್ತರವನ್ನು ಸಹ ನೀಡದೆ ಹಾಗೂ ಬಾಕಿ ಪರವಾನಗಿ ಶುಲ್ಕವನ್ನು ಪಾಲಿಕೆಗೆ ಪಾವತಿಸದೇ ಲೋಪ ಎಸಗಿರುತ್ತಾರೆ. ಈ ಮಧ್ಯೆ ದಿನಾಂಕ: 29-9-2011 ರಂದು ರೂ. 50,000/- ಗಳಿಗೆ ಮಾತ್ರ ಡಿಮ್ಯಾಂಡ್ ಡ್ರಾಫ್ಟ್ ಅನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಇದರಿಂದ ಸದರಿಯವರು ಪಾಲಿಕೆಗೆ ಆರ್ಥಿಕ ನಷ್ಟವಾಗಲು ಕಾರಣರಾಗಿರುತ್ತಾರೆ. ಈ ಅಂಶಗಳನ್ನು ಅಫೀಲು ಸ್ಥಾಯಿ ಸಮಿತಿ ಮುಂದೆ ಮಂಡಿಸಿ ಶ್ರೀಮತಿ. ಡಿ.ವಿದ್ಯಾ ರವರ ಮೇಲ್ಮನವಿಯನ್ನು ತಿರಸ್ಕರಿಸುವಂತೆ ಕೋರಿದೆ.

ಪ್ರಕರಣವನ್ನು ಕರೆಯಲಾಯಿತು ಮನವಿದಾರರು ಗೈರುಹಾಜರಾಗಿದ್ದು ಮನವಿದಾರರ ಪರವಾಗಿ ಅವರ ಪತಿ ಶೀ.ಶಿವನೇಶ್ ರವರು ಹಾಜರಿದ್ದರು, ಸಹಾಯಕ ಕಂದಾಯ ಅಧಿಕಾರಿ (ದಕ್ಷಿಣ ಮಾರುಕಟ್ಟೆ) ಹಾಜರಿದ್ದು,ಮನವಿದಾರರು ರೂ.2ಲಕ್ಷ ಹಾಗೂ ಮತ್ತೋಂದು ಬ್ಯಾಂಕರ್ ಚೆಕ್ಕ್ ರೂ.162500/-ಗಳನ್ನು ಬಾಡಿಗೆ ಮೊತ್ತಕ್ಕೆ ನೀಡಿರುವುದಾಗಿ ತಿಳಿಸಿದ್ದು, ಸಹಾಯಕ ಕಂದಾಯ ಅಧಿಕಾರಿ ರವರು ಡಿಡಿ ಮತ್ತು ಚೆಕ್ ನಂಬರ್ಗಳನ್ನು ನೀಡದೆ ಇರುವುದರಿಂದ ಹಾಗೂ ಮನವಿದಾರರ ಪರವಾಗಿ ಹಾಜರಿರುವ ಅವರ ಪತಿ ವಿಚಾರಣೆಗೆ ಹಾಜರಾಗಲು ಅಧಿಕಾರ ಪತ್ರವನ್ನು ತರದೇ ಇರುವುದರಿಂದ ಸದರಿ ಮಾಹಿತಿಗಳನ್ನು ಸಮಿತಿಗೆ ಹಾಜರು ಪಡಿಸುವ ಸಲುವಾಗಿ ಪ್ರಕರಣವನ್ನು ಮುಂದೂಡಿದೆ.

**ವಿಷಯ:ಸಂಖ್ಯೆ:ಅಸ್ಥಾಸ/(ತೆ)/26/2012-13** ಅಪರ ಆಯುಕ್ತರು (ರಾಜರಾಜೇಶ್ವರಿನಗರ) ರವರ ಟಿಪ್ಪಣಿ ದಿನಾಂಕ:22-1-2013ರ ರೀತ್ಯಾ ಆಸ್ತಿ ಸಂಖ್ಯೆ:694ಎ/65,ಹಚ್.ಎಂ.ಟಿ.ಮುಖ್ಯರಸ್ತೆ ಗೋಕುಲ 1ನೇ ಹಂತ 1ನೇ ಮುಖ್ಯ ವಾರ್ಡ್-17ರ ಸ್ವತ್ತಿನ ಖಾತೆಯು ಈ ಕಛೇರಿ ದಾಖಲೆಗಳಲ್ಲಿ ಶ್ರೀ.ಎ.ರಾಮಕೃಷ್ಣಯ್ಯ ರವರ ಹೆಸರಿನಲ್ಲಿದ್ದು, ಸದರಿ ಸ್ವತ್ತಿನ ಅಳತೆ 2000 ಚದರಡಿಗಳಿದ್ದಯ, ಖಾತೇದಾರರು ದಿನಾಂಕ:01-04-2008 ರಿಂದ ಜಾರಿಗೆ ಬರುವಂತೆ ಸ್ವಯಂ ಘೋಷಿತ ಆಸ್ತಿ ತೆರಿಗೆ ಯೋಜನೆ ಅಡಿಯಲ್ಲಿ 1992-93ನೇ ಸಾಲಿನಲ್ಲಿ 5800 ಅಡಿಗಳ ಕಟ್ಟಡ ನಿರ್ಮಿಸಿರುವುದಾಗಿಯೂ ಅದರ ಪೈಕಿ 1500 ಚದರಡಿಗಳಿಗೆ ರೂ.1.80 ಪೈಸೆಯಂತೆ ಸ್ವಂತ ವಾಸಕ್ಕೆ 2100 ಅಡಿಗಳನ್ನು ಸೇವಾ ಪ್ರದೇಶ ಎಂದು ಪರಿಗಣಿಸಿಕೊಂಡು ರೂ.3/- ನಂತೆ ಶೇಕಡ 50% ರಷ್ಟು ದರ ನಿಗಧಿ ಪಡಿಸಿ ಶೇ.25% ರಷ್ಟು ಪ್ರದೇಶ ಅಂದರೆ 700 ಚದರಡಿಗಳೆಂದು ಹಾಗೂ ಉಳಿಕೆ 1500 ಚ.ಅ.ಗಳನ್ನು ವಾಹನ ಪ್ರದೇಶ ವಾಡಿಗೆಗೆ ಘೋಷಿಸಿಕೊಂಡಿರುತ್ತಾರೆ. ಎಲ್ಲಾ ಸ್ವತ್ತುಗಳಿಗೆ ಶೇ.18% ರಂತೆ ಸವಕಳಿ ನೀಡಿಕೊಂಡಿರುತ್ತಾರೆ ಈ ಸ್ವತ್ತಿನಲ್ಲಿ 4 ಮಹಡಿಗಳನ್ನು ಘೋಷಿಸಿಕೊಂಡಿದ್ದು ಮಂಜೂರಾತಿ ನಕ್ಷೆ ಹಾಜರುಪಡಿಸಿರುವುದಿಲ್ಲ.

ಸದರಿ ಸ್ವತ್ತಿನ ಮಾಲೀಕರು ತಪ್ಪು ಮಾಹಿತಿ ನೀಡಿ ಕಂದಾಯ ಪಾವತಿಸುತ್ತಿರುವುದು ಕಂಡು ಬಂದಿರುವುದರಿಂದ ಕಟ್ಟಡದಲ್ಲಿ ತಳ ಅಂತಸ್ತು 1500 ಚದರಡಿ,ನೆಲ ಅಂತಸ್ತು 1500 ಚದರಡಿ, 1ನೇ ಅಂತಸ್ತು ಮತ್ತು 2ನೇ ಅಂತಸ್ತುಗಳು ಒಟ್ಟು 2800 ಚದರಡಿ(ಮುತ್ತೋಟ್ ಫೈನಾನ್ಸ್) ಒಟ್ಟು 5800 ಚದರಡಿಗಳ ಪೂರ್ಣ ಕಟ್ಟಡದ ಉಪಯೋಗ ಬಾಡಿಗೆ ಆಧಾರ ಒಟ್ಟು ವಾರ್ಷಿಕ ಮೌಲ್ಯ ರೂ.3,80,480/- (ವಸತಿಯೇತರ)ಗಳಿಗೆ ದಿನಾಂಕ:01-04-2008ರಿಂದ ಬಾಡಿಗೆ ಬರುವಂತೆ ಕಂದಾಯ ನಿಗಧಿಪಡಿಸಿ ಈ ವಲಯ ಕಛೇರಿ ವಾರ್ಡ್-17ರ ಎಂ.ಟಿ.ಆರ್.10/11-12 ರಂತೆ ವಿಶೇಷ ಸೂಚನಾ ಪತ್ರವನ್ನು ದಿನಾಂಕ: 11-08-2011 ರಂದು ಸ್ವತ್ತಿನ ಮಾಲೀಕರಿಗೆ ಜಾರಿಗೊಳಿಸಿದೆ.

ದಿನಾಂಕ:11-08-2011 ರಂದು ಈ ಕಛೇರಿಯಿಂದ ನೀಡಿರುವ ವಿಶೇಷ ಸೂಚನಾ ಪತ್ರದಲ್ಲಿ ನಿಗಧಿಪಡಿಸಿರುವ ಕಂದಾಯದ ವಿರುದ್ಧ ಪ್ರಥಮ ಅಫೀಲು ಅಧಿಕಾರಿ ಕಂದಾಯ ಅಧಿಕಾರಿ (ರಾಜರಾಜೇಶ್ವರಿನಗರ)ವಲಯ ರವರಿಗೆ ಅಫೀಲು ಮನವಿ

ಸಲ್ಲಿಸಿದ್ದ ಮೇರೆಗೆ ಅಪೀಲು ಹೇಳಿಕೆ ಪ್ರಕಾರ 5800 ಚದರಡಿ ಕಟ್ಟಡಕ್ಕೆ ರೂ.13,776/-(ವಸತಿ),2,88,640/-(ವಸತಿಯೇತರ) ಗಳಿಗೆ ದಿನಾಂಕ;01-04-2008ರಿಂದ ಕಂದಾಯವನ್ನು ಮರು ನಿಗಧಿಪಡಿಸಿ ಈ ವಲಯ ಕಛೇರಿ ವಿಶೇಷ ಸೂಚನಾ ಪತ್ರದ ಸಂಖ್ಯೆ: ಎಂ.ಟಿ.ಆರ್.28/11-12 ರಂತೆ ಕಂದಾಯವನ್ನು ಮರು ನಿಗಧಿಪಡಿಸಿದೆ. ಮೇಲ್ಕಂಡಂತೆ ಕಂದಾಯ ನಿಗಧಿಪಡಿಸಿರುವುದರ ವಿರುದ್ದ ಖಾತೇದಾರರು ಅಧ್ಯಕ್ಷರು, ಅಪೀಲು ಸ್ಥಾಯಿ ಸಮಿತಿ ರವರಿಗೆ ಅರ್ಜಿ ಸಲ್ಲಿಸಿದ್ದು **ಅಪೀಲು ಅರ್ಜಿಯ ಕಾಲಮಿತಿಯಲ್ಲಿರುವುದಿಲ್ಲ** ಪೂರ್ಣ ಕಡತವನ್ನು ಸಮಿತಿಯ ತೀರ್ಮಾನ ಕೋರಿ ಮಂಡಿಸಿದೆ.

ಪ್ರಕರಣವನ್ನು ಕರೆಯಲಾಯಿತು ಮನವಿದಾರರು ಹಾಜರಿದ್ದು ಪ್ರತಿವಾದಿಗಳು ಗೈರುಹಾಜರಾಗಿದ್ದು ಪ್ರತಿವಾದಿ ಸಹಾಯಕ ಕಂದಾಯ ಅಧಿಕಾರಿ (ಯಶವಂತಪುರ)ರವರಿಗೆ ಚುನಾವಣೆ ತರಬೇತಿ ನಿಯೋಜಿಸಿರುಸುವುದಾಗಿ ತಿಳಿಸಿದ್ದು ಪ್ರಕರಣವನ್ನು ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ.

**ವಿಷಯ:ಸಂಖ್ಯೆ:ಅಸ್ಥಾಸ/(ಅ)/28/2012-13** ಉಪ ಅರೋಗ್ಯಾಧಿಕಾರಿ(ಕಾಟನ್ ಪೇಟೆ) ರವರ ಪ್ರಕರಣದ ಬಗ್ಗೆ ಸಂಕ್ಷಿಪ್ತ ವಿವರಗಳ ದಿನಾಂಕ: 4-1-2013ರ ರೀತ್ಯಾ ಶ್ರೀ.ಸಿ.ಎಂ.ಕುಪ್ಪಸ್ವಾಮಿ, ನಂ.54/2, ಶಂಕರಪ್ಪ ಗಾರ್ಡನ್ ಎಡಭಾಗ, ಬೆಂಗಳೂರು ವಾರ್ಡ್ 121 ರವರು, ಬೃ.ಬೆಂ.ನ.ಪಾಲಿಕೆಯಿಂದ ಉದ್ದಿಮೆ ಪರವಾನಗಿ ಪಡೆದು, (ಪ.ಸಂ.10465/10-11 05 ಅಶ್ವಶಕ್ತಿ) ವರ್ಕ್‌ಶಾಪ್ ನಡೆಸುತ್ತಿದ್ದು, ಡಿ.ಭಾಸ್ಕರ್, ನಂ.11/2, 10ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು ರವರು ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಸದರಿ ಉದ್ದಿಮೆಯ ಪರವಾನಗಿ ದಾಖಲಾತಿಗಳನ್ನು ಪಡೆದು, ಈ ದಾಖಲಾತಿಗಳ ವ್ಯತ್ಯಾಸದ ಬಗ್ಗೆ ಕ್ರಮ ಕೈಗೊಳ್ಳಲು ಕೋರಿರುತ್ತಾರೆ. ಇದರಂತೆ ಮೂಲ ಕಡತವನ್ನು ಪರಿಶೀಲಿಸಲಾಗಿ, ಕಂದಾಯ ಪಾವತಿ ರಸೀದಿಯಲ್ಲಿ ಸ್ವತ್ತಿನ ಮಾಲೀಕರು ಶ್ರೀಮತಿ ಕುಮಾರೇಶನ್ ಎಂದು ನಮೂದಾಗಿರುತ್ತದೆ ಹಾಗೂ ಎಂ.ಕುಪ್ಪಸ್ವಾಮಿ ಪರವಾನಗಿ ನಮೂನೆಯ ಮಾಲೀಕರ ಒಪ್ಪಿಗೆ ಪತ್ರದಲ್ಲಿ ಎಂ.ಕುಪ್ಪಸ್ವಾಮಿ ಎಂದು ಸಹಿ ಮಾಡಿರುತ್ತಾರೆ. ಆದ್ದರಿಂದ ದಾಖಲಾತಿಗಳು ವ್ಯತ್ಯಾಸವಿರುವ ಕಾರಣ 05 ಅಶ್ವಶಕ್ತಿ ವರ್ಕ್‌ಶಾಪ್ ಉದ್ದಿಮೆಯ ಪರವಾನಗಿಯನ್ನು ರದ್ದುಪಡಿಸಲಾಗಿರುತ್ತದೆ.

ಸದರಿಯವರು ಈ ಬಗ್ಗೆ ಮಾನ್ಯ ಉಚ್ಛನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ. ಡಬ್ಲ್ಯೂ. ಪಿ.ನಂ. 364162/2002ರ ಸೂಚನೆಯಂತೆ ಮತ್ತೊಮ್ಮೆ ನೋಟೀಸ್ ಅನ್ನು ಜಾರಿ ಮಾಡಲಾಗಿದ್ದು, ಈ ನೋಟೀಸ್‌ಗೆ ಸದರಿ ರವರು ಉತ್ತರ ಸಲ್ಲಿಸಿ, ನಂ.54/2, ಶಂಕರಪ್ಪ ಗಾರ್ಡನ್, ವಾರ್ಡ್ 121 ಈ ಸ್ವತ್ತಿಗೆ ತಾನೇ ಮಾಲೀಕನೆಂದು ಕರಾರು ಪತ್ರ ಸಲ್ಲಿಸಿರುತ್ತಾರೆ. ಈ ಪತ್ರವನ್ನು ಪರಿಶೀಲಿಸಲಾಗಿ, ಶ್ರೀ.ಡಿ.ಭಾಸ್ಕರ್ ರವರು ಸದರಿ ಸ್ವತ್ತನ್ನು ಶ್ರೀ.ಎಂ.ಕುಪ್ಪಸ್ವಾಮಿ ರವರಿಗೆ ಮಾರಾಟ ಮಾಡಿರುವುದಾಗಿ ತಿಳಿಸಿರುತ್ತಾರೆ. ಆದರೆ, ಈ ಕರಾರು ಪತ್ರ ಉಪನೊಂದಣಿ ಕಛೇರಿಯಲ್ಲಿ ದಾಖಲಾಗಿರುವುದಿಲ್ಲ ಮತ್ತು ಎಂ.ಕುಪ್ಪಸ್ವಾಮಿ ರವರ ಹೆಸರಿಗೆ ಸದರಿ ಸ್ವತ್ತು ವರ್ಗಾವಣೆಯಾಗಿರುವ ಬಗ್ಗೆ ಯಾವುದೇ ದಾಖಲಾತಿಗಳು, ಖಾತೆ, ಕಂದಾಯ ದಾಖಲೆಗಳು ಇರುವುದಿಲ್ಲ. ಶ್ರೀಮತಿ ಸುಮತಿ ಕುಮಾರೇಶನ್ ಹೆಸರಿನಲ್ಲಿ ಸದರಿ ಸ್ವತ್ತಿನ ಕಂದಾಯ ಪಾವತಿಸಿರುವ ವಿವರಗಳು ಇರುತ್ತವೆ. ಆದುದರಿಂದ ಸದರಿ ವಿವರಗಳನು ಪರಿಶೀಲಿಸಿ, ಶ್ರೀ.ಎಂ.ಕುಪ್ಪಸ್ವಾಮಿ ರವರು ಸ್ವತ್ತಿನ ಮಾಲೀಕರಲ್ಲದ ಕಾರಣ ದಾಖಲಾತಿಗಳ ವ್ಯತ್ಯಾಸವಿರುವುದರಿಂದ ಉದ್ದಿಮೆ ಪರವಾನಗಿ ಸಂಖ್ಯೆ:10465/10-11 (05 ಅಶ್ವಶಕ್ತಿ ವರ್ಕ್‌ಶಾಪ್)ಯನ್ನು ರದ್ದುಪಡಿಸಲಾಗಿರುತ್ತದೆ.

ಈ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿದ್ಯುತ್) ಕಾ ಮತ್ತು ಪಾ ಬೆಸ್ಕಾಂ ರವರಿಗೆ ವಿದ್ಯುತ್ ಕಡಿತಗೊಳಿಸಲು ಪತ್ರ ನೀಡಿದ್ದು, ಸದರಿ ರವರು ಈ ಕಛೇರಿಗೆ ಪತ್ರ ಬರೆದು ಉಚ್ಛ ನ್ಯಾಯಾಲಯದ ಆದೇಶ ಸಂಖ್ಯೆ:ಡಬ್ಲ್ಯೂ.ಪಿ.ನಂ.40345/2012 (ಜೆ.ಹೆಚ್.ಕೆ.ಇ.ಬಿ.) 41129/2012 ದಿನಾಂಕ 18/10/2012 ರ ಮೇರೆಗೆ ಸದರಿ ಸ್ವತ್ತಿಗೆ ದಿನಾಂಕ 22/10/2012 ರಲ್ಲಿ ವಿದ್ಯುತ್ ಸಂಪರ್ಕ ನೀಡಲಾಗಿದು, ನ್ಯಾಯಾಲಯದ ತಡೆಯಾಜ್ಞೆ ಇರುವ ಮುಂದಿನ ಆದೇಶದಂತೆ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ. ಆದ್ದರಿಂದ ಈ ಎಲ್ಲಾ ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತಾ, ಸದರಿ ವಿಷಯಕ್ಕೆ ಸಂಬಂಧಪಟ್ಟ ನ್ಯಾಯಾಲಯದ ಮೂಲ ಕಡತ ಮತ್ತು ಮಂಜೂರಾತಿ ಪರವಾನಗಿ ಕಡತ ಲಗತ್ತಿಸಿ, ಈ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಅಧ್ಯಕ್ಷರು ಅಪೀಲುಗಳ ಸ್ಥಾಯಿ ಸಮಿತಿ ರವರಿಗೆ ಸಲ್ಲಿಸಿದೆ.

ಪ್ರಕರಣವನ್ನು ಕರೆಯಲಾಯಿತು ಮನವಿದಾರರು ಹಾಜರಿದ್ದರು ಶ್ರೀ.ರಮೇಶ್ ವಕೀಲರು ಉದ್ದಿಮಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ನೀಡಿರುವುದಾಗಿ ತಿಳಿಸಿದರು. ಮಾಲಿಕರು ನಡೆಸುತ್ತಿರುವ ಉದ್ದಿಮೆ ಪರವಾನಿಗೆ ಅಕ್ಕ ಪಕ್ಕದವರು ನಿರಾಕ್ಷೇಪಣ ಪತ್ರವನ್ನು ನೀಡಿರುವುದಿಲ್ಲ, ಅದ್ದುರಿಂದ ಮನವಿದಾರರು ಸ್ಪಷ್ಟ ಮಾಹಿತಿಯನ್ನು ನೀಡಿರುವುದಿಲ್ಲ. ಈ ಉದ್ದಿಮೆಯನ್ನು ಸುಮಾರು 10 ವರ್ಷಗಳಿಂದ ನಡೆಸಿಕೊಂಡು ಬಂದಿರುತ್ತದೆ. ಪ್ರತಿವಾದಿಗಳು ನಡೆಸುತ್ತಿರುವ ಈ ಉದ್ದಿಮೆಯನ್ನು ಯಾವುದೇ ಕಾರಣಕ್ಕು ನವೀಕರಿಸಬಾರದು ಎಂದು ಸ್ವತ್ತಿನ ಮಾಲಿಕರು ತಿಳಿಸಿದರು. ಮನವಿದಾರರು ವಿಚಾರಣೆ ಸಂದರ್ಭದಲ್ಲಿ ಎಲ್ಲಾ ಮೂಲ ದಾಖಲೆಗಳನ್ನು ನೀಡಿರುವುದಾಗಿಯು ಅದರೂ ಸಹ ಸ್ವತ್ತಿನ ಮಾಲಿಕರು ನಿರಾಕ್ಷೇಪಣ

ಪತ್ರವನ್ನು ನೀಡದೆ ಇರುವ ಕಾರಣ ಉದ್ದಮೆ ಪರವಾನಗಿಯನ್ನು ನವೀಕರಿಸಿರುವುದಿಲ್ಲವೆಂದು ಉಪ ಆರೋಗ್ಯಾಧಿಕಾರಿಗಳು ಸಭೆಗೆ ವಿವರಿಸುತ್ತಾರೆ.
ಪ್ರಕರಣವನ್ನು ಹೆಚ್ಚಿನ ಮಾಹಿತಿಗಾಗಿ ಮುಂದೂಡಿದೆ.

**ವಿಷಯ:ಸಂಖ್ಯೆ:ಅಸ್ಥಾಸ/(ತೆ)/29/2012-13** ಅಪರ ಆಯುಕ್ತರು(ದಕ್ಷಿಣ)ರವರು ದಿನಾಂಕ: 29/6/12ರ ಟಿಪ್ಪಣಿಯ ರೀತ್ಯಾ ಸ್ವತ್ತಿನ ಸಂಖ್ಯೆ:31 ಮೇದಾರ್ ಪೇಟೆ ಬೆಂಗಳೂರು-02 ವಾರ್ಡ್-119ರ ಖಾತೆಯು ವಿ. ಸುನಿತ ಗುಜ್ಜರ್ ರವರ ಹೆಸರಿನಲ್ಲಿ ದಾಖಲಾಗಿದ್ದು ಸ್ವತ್ತಿನ ಅಳತೆ 35 X 25=875 ಚದರಡಿಗಳಾಗಿದ್ದು, ವಾರ್ಷಿಕ ಮೌಲ್ಯ ರೂ 20128 ವಸತಿ, ರೂ 139929 ವಸತಿಯೇತರ ಗಳ ಮೇಲೆ ನಿಗಧಿಸಲ್ಪಟ್ಟಿರುತ್ತದೆ. ಸ್ವತ್ತಿನಲ್ಲಿ ನೆಲ ಅಂತಸ್ತು 1ನೇ, 2ನೇ, 3ನೇ, 4ನೇ, 5ನೇ ಮತ್ತು 6ನೇ ಅಂತಸ್ತಿನ ಒಟ್ಟು 6125 ಚದರಡಿ ಕಟ್ಟಡವಿದ್ದು ಇದರಲ್ಲಿ ವಸತಿಯೇತರ ಮತ್ತು ವಸತಿಗಾಗಿ ಸ್ವಂತಕ್ಕೆ ಮತ್ತು ಬಾಡಿಗೆಗೆ ಉಪಯೋಗಿಸುತ್ತಿರುತ್ತಾರೆ. ಸದರಿ ವಸತಿಗಾಗಿ 440 ಚದರಡಿ ವಸತಿಯೇತರ 5885 ಸ್ವತ್ತಿಗೆ ಎಸ್.ಎ.ಎಸ್‌ನ ಸಾಮಾನ್ಯ ಪರಿಷ್ಕರಣೆ ಅಡಿಯಲ್ಲಿ ಕಂದಾಯವನ್ನು (1 ರಿಂದ 6ನೇ ಅಂತಸ್ತಿನ ವರೆಗೆ) ಒಟ್ಟು 6325 ಚದರಡಿಗಳ ವಾರ್ಷಿಕ ಮೌಲ್ಯವನ್ನು 482570 ವಸತಿಯೇತರಗಳಿಗೆ ದಿನಾಂಕ:01-04-2008 ರಿಂದ ಜಾರಿಗೆ ಬರುವಂತೆ ಕಂದಾಯ ಪರಿಷ್ಕರಿಸಿ ನಿಗಧಿಪಡಿಸಲಾಗಿರುತ್ತದೆ.

ಖಾತೆದಾರರು ಕಂದಾಯ ಪರಿಷ್ಕರಣೆ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿ ಅಪೀಲು ಅರ್ಜಿ ಸಲ್ಲಿಸಿದ್ದರ ಮೇರೆಗೆ ಪ್ರಥಮ ಅಪೀಲು ಅಧಿಕಾರಿಯವರು ಅಪೀಲು ವಿಚಾರಣೆ ನಡೆಸಿ 1 ರಿಂದ 6ನೇ ಅಂತಸ್ತಿನವರೆಗೆ ತಳ ಅಂತಸ್ತು 213 ಚದರಡಿ ತಳ ಅಂತಸ್ತು 513 ವಸತಿಯೇತರ, ನೆಲ 726 ಚದರಡಿ, 1ನೇ ಅಂತಸ್ತು 726 ಚದರಡಿ ವಸತಿಯೇತರ ಬಾಡಿಗೆಗೆ, 2ನೇ ಅಂತಸ್ತು 726 ಚದರಡಿ, 3ನೇ ಅಂತಸ್ತಿನ 726 ಚದರಡಿ ವಸತಿಯೇತರ ಸ್ವಂತ, 4ನೇ ಅಂತಸ್ತಿನ 726 ಚದರಡಿ, 5ನೇ ಅಂತಸ್ತಿನ ಸ್ವಂತ ವಸತಿಗಾಗಿ 6ನೇ ಅಂತಸ್ತಿನ ಎಸಿ ಶೀಟ್ ಸ್ವಂತ ವಸತಿಗಾಗಿ ಎಂದು ತಿರ್ಮಾನಿಸಿ ವಾರ್ಷಿಕ ಮೌಲ್ಯವನ್ನು 482570 ವಸತಿಯೇತರಗಳಿಂದ ರೂ. 249680 ವಸತಿಯೇತರಗಳಿಗೆ ಹಾಗೂ ವಸತಿ 5773 ಗಳಿಂದ ರೂ. 18581 ವಸತಿ ಗಳಿಗೆ ದಿನಾಂಕ:01-04-2008 ರಿಂದ ಅನ್ವಯವಾಗುವಂತೆ ಕಡಿಮೆ ಮಾಡಿರುತ್ತಾರೆ.

ಪ್ರಥಮ ಅಪೀಲು ಅಧಿಕಾರಿಯವರ ಆದೇಶದ ವಿಶೇಷ ಸೂಚನಾ ಪತ್ರ ಸ್ವೀಕರಿಸಿದ ಖಾತೆದಾರರು ಮನವಿ ಸಲ್ಲಿಸಿ ಸದರಿ ಕಟ್ಟಡವು ಸುಮಾರು 35 ವರ್ಷ ಹಳೆಯದ್ದಾಗಿದ್ದು ಕಟ್ಟಡದ ಅಳತೆ ಹಾಗೂ ಕಟ್ಟಡದ ವಯಸ್ಸು ಹಾಗೂ ಉಪಯೋಗಕ್ಕೆತಕ್ಕಂತೆ ಕಂದಾಯ ಕಡಿಮೆ ಮಾಡಲು ಕೋರಿರುತ್ತಾರೆ.

.

ಪ್ರಕರಣವನ್ನು ಕರೆಯಲಾಯಿತು ಮನವಿದಾರರು ಹಾಗೂ ಪ್ರತಿವಾದಿ ಶ್ರೀ.ಲಿಂಗಯ್ಯ ಸಹಾಯಕ ಕಂದಾಯ ಅಧಿಕಾರಿ (ಕೆಂಪೇಗೌಡನಗರ)ಇವರುಗಳು ಹಾಜರಿದ್ದು ಮನವಿದಾರರು ನಿಗಧಿ ಪಡಿಸಿರುವ ಕಂದಾಯವು ಸಮಂಜಸವಾಗಿರುವುದಿಲ್ಲ. ಅದುದರಿಂದ ಪ್ರಕರಣವನ್ನು ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ.

**ವಿಷಯ:ಸಂಖ್ಯೆ:ಅಸ್ಥಾಸ/(ಜಾ)/30/2012-13** ಆಪರ ಆಯುಕ್ತರು(ಜಾ)ರವರ ಟಿಪ್ಪಣಿ ದಿನಾಂಕ;16-3-13ರ ರೀತ್ಯಾ ಶ್ರೀ.ವಿ.ಕಣ್ಣಾಪೀರನ್, ನಂ-78, ಡಿಸ್ಪೆನ್ಸರಿ ರಸ್ತೆ, ಬೆಂಗಳೂರು. ಇವರಿಗೆ ಡಿಸ್ಪೆನ್ಸರಿ ರಸ್ತೆಯಲ್ಲಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಂಗಡಿಯ ಮೇಲೆ 2ಥ16 ಅಡಿ ಅಳತೆಯ ವಿದ್ಯುತ್ ಚಾಲಿತ ಜಾಹೀರಾತು ಫಲಕ ಅಳವಡಿಸಲು ದಿನಾಂಕ:01.11.2001ರಿಂದ 31.10.2004 ರವರೆಗೆ ವಿಷಯದ ಸಂಖ್ಯೆ:ಕೆಆ.121/01-02 ದಿನಾಂಕ:11.02.2002ರಂದು ಮೂರು ವರ್ಷಗಳಿಗೆ ಅನುಮತಿ ನೀಡಲಾಗಿರುತ್ತದೆ. ಮುಂದುವರೆದಂತೆ, ದಿನಾಂಕ:01.11.2004ರಿಂದ 31.10.2005ರವರೆಗೆ ಅನುಮತಿ ನೀಡಲಾಗಿದೆ. ಸದರಿ ಜಾಹೀರಾತುದಾರರು ಪುನಃ ಅನುಮತಿಯ ಅವಧಿಯನ್ನು 6 ವರ್ಷಗಳ ಅವಧಿಗೆ ನವೀಕರಿಸಬೇಕೆಂದು ಮನವಿ ಸಲ್ಲಿಸಿರುತ್ತಾರೆ. ವಿದ್ಯುತ್ ಚಾಲಿತ ಜಾಹೀರಾತು ಫಲಕದ ರೀ ಲೈಸನ್ಸ್ ಫೀ ಹಾಗೂ ಜಾಹೀರಾತು ತೆರಿಗೆಯನ್ನು ದಿನಾಂಕ:31.10.2006ರವರೆಗೆ ಪಾವತಿಸಿಕೊಳ್ಳಲಾಗಿರುತ್ತದೆ. ಅದರಂತೆ ದಿನಾಂಕ:01.11.2005 ರಿಂದ 31.10.2010 ರವರೆಗೆ (ಘಟನೋತ್ತರ ಅವಧಿಯೂ ಸೇರಿದಂತೆ) ಐದು ವರ್ಷಗಳಿಗೆ ಮಾನ್ಯ ಆಡಳಿತಗಾರರ ವಿಷಯದ ಸಂಖ್ಯೆ:242/08-09 ದಿನಾಂಕ:18.06.2008ರ ನಿರ್ಣಯದಂತೆ ಅನುಮತಿ ನೀಡಲಾಗಿತ್ತು. ತದನಂತರ ಸದರಿಯವರು ದಿನಾಂಕ:01.11.2010ರಿಂದ 31.10.2015ರವರೆಗೆ ಐದು ವರ್ಷಗಳ ಅವಧಿಗೆ ಅನುಮತಿ ನೀಡಲು ಕೋರಿರುವ ಮೇರೆಗೆ ದಿನಾಂಕ:01.11.2010ರಿಂದ 31.10.2015ರವರೆಗೆ ಐದು ವರ್ಷಗಳ ಅವಧಿಗೆ ಅನುಮತಿ ನೀಡುವ ಕುರಿತು ನಗರ ಯೋಜನೆ ಮತ್ತು ಆರ್ಥಿಕ ಸ್ಥಾಯಿ ಸಮಿತಿರವರಿಗೆ ಟಿಪ್ಪಣಿಯನ್ನು ಮಂಡಿಸಲಾಗಿತ್ತು.

ಆದರೆ,ನಗರ ಯೋಜನೆ ಮತ್ತು ಆರ್ಥಿಕ ಸ್ಥಾಯಿ ಸಮಿತಿರವರು ಸದರಿ ಪ್ರಸ್ಥಾವನೆಯನ್ನು ತಿರಸ್ಕರಿಸಿರುತ್ತಾರೆ. ಶ್ರೀ.ವಿ.ಕಣ್ಣಾಪೀರನ್, ರವರು ಅಳವಡಿಸಿರುವ 2*16 ಅಡಿ ಅಳತೆಯ ವಿದ್ಯುತ್ ಚಾಲಿತ ಜಾಹೀರಾತು ಫಲಕಕ್ಕೆ

ಶ್ರೀ.ಕಣ್ಣಾಪೀರನ್ ರವರು ದಿನಾಂಕ:30.06.2012ರವರೆಗೆ ಪಾಲಿಕೆಗೆ ಪಾವತಿಸಬೇಕಾದ ಮೊತ್ತವನ್ನು ಪಾವತಿಸಿ ನಂತರ ಅಳವಡಿಸಿರುವ 2*16 ಅಡಿ ಅಳತೆಯ ಫಲಕವನ್ನು ತೆರವುಗೊಳಿಸುವಂತೆ ಹಿಂಬರಹವನ್ನು ದಿನಾಂಕ:19.04.2012ರಂದು ಶ್ರೀ ವಿ.ಕಣ್ಣಾಪೀರನ್ ಇವರಿಗೆ ಜಾರಿಗೊಳಿಸಲಾಗಿತ್ತು.ಅಪೀಲು ಸ್ಥಾಯಿ ಸಮಿತಿಯ ಅಧ್ಯಕ್ಷರು ದಿನಾಂಕ:31.07.2012ರಂದು ಆಯುಕ್ತರಿಗೆ ಒಂದು ಪತ್ರವನ್ನು ಬರೆದು ಸದರಿ ವಿಷಯದ ಬಗ್ಗೆ ಒಂದು ಟಿಪ್ಪಣಿಯನ್ನು ತಯಾರಿಸಿ ಸಂಬಂಧಪಟ್ಟ ಕಡತವನ್ನು ಸಮಿತಿ ಮುಂದೆ ಮಂಡಿಸಲು ಸೂಚಿಸಿರುವುದರಿಂದ ಅವಗಾಹನೆಗೆ ಸಮಿತಿಯ ಮುಂದೆ ಮಂಡಿಸಲಾಗಿದೆ.

ಪ್ರಕರಣವನ್ನು ಕರೆಯಲಾಯಿತು ಮನವಿದಾರರು ಗೈರುಹಾಜರಾಗಿದ್ದು ಪ್ರತಿವಾದಿ ಹಾಜರಾಗಿದ್ದು ಆದುದರಿಂದ ಪ್ರಕರಣವನ್ನು ಮುಂದೂಡಿದೆ.

**<u>ವಿಷಯ:ಸಂಖ್ಯೆ:ಅಸ್ಥಾಸ/(ತೆ)/31/2012-13</u>** ಅಪರ ಆಯುಕ್ತರು (ದಕ್ಷಿಣ) ರವರು ಮಂಡಿಸಿರುವ ಟಿಪ್ಪಣಿ ರೀತ್ಯಾ ಸ್ವತ್ತಿನ ಸಂಖ್ಯೆ: 51, ಸಜ್ಜನ್‌ರಾವ್ ರಸ್ತೆ, ವಿ.ವಿ.ಪುರಂ ವಾರ್ಡ್ 143 ರ ಸ್ವತ್ತಿಗೆ ಸಂಬಂಧಿಸಿದಂತೆ, ಆಸ್ತಿ ತೆರಿಗೆ ಪಾವತಿಸುವ ಬಗ್ಗೆ ಮೆ|| ರಾಜಾ ಎಂಟರ್ ಪ್ರೈಸಸ್ ನ ಪ್ರತಿನಿಧಿಯಾದ ಮ್ಯಾನೇಜಿಂಗ್ ಪಾರ್ಟನರ್ ಶ್ರೀ. ರಾಜಾದತ್ತ ಕುಮಾರ್ ರವರಿಗೆ ದಿನಾಂಕ: 12.10.2011 ರಂದು ಹಿಂಬರಹ ನೀಡಲಾಗಿದ್ದು, ಈ ಹಿಂದೆ ಸದರಿ ಆಸ್ತಿಗೆ ಸಂಬಂಧಪಟ್ಟಂತೆ ದಿನಾಂಕ: 25.01.1992 ರಂದು ವಸತಿಯೇತರ ವಾರ್ಷಿಕ ಮೌಲ್ಯ ರೂ. 1,57,000/-ಗಳಿಂದ ರೂ. 12,59,900/-ಗಳಿಗೆ ದಿನಾಂಕ: 01.10.1991 ರಿಂದ ಆಸ್ತಿ ತೆರಿಗೆಯನ್ನು ಪರಿಷ್ಕರಿಸಲಾಗಿರುತ್ತದೆ. ಈ ರೀತಿಯಾಗಿ ಪರಿಷ್ಕರಿಸಿರುವ ಆಸ್ತಿ ತೆರಿಗೆಯನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಡಬ್ಲ್ಯೂ.ಪಿ. ನಂ. 7939/93 ರಲ್ಲಿ ಮೊಕದಮ್ಮೆ ಹೂಡಲಾಗಿದ್ದು, ಸದರಿ ಮೊಕದಮ್ಮೆಯನ್ನು ದಿನಾಂಕ: 15.03.1994ರಲ್ಲಿ ಇತ್ಯರ್ಥಗೊಳಿಸಿ, ನ್ಯಾಯಾಲಯದ ನಿರ್ದೇಶನದ ಪ್ರಕಾರ ಮೊದಲನೇ ಅಪೀಲು ಅಧಿಕಾರಿಯವರು ಅರ್ಜಿದಾರರ ಅಹವಾಲನ್ನು ಕೇಳಿ ದಿನಾಂಕ: 17.04.1996 ರಲ್ಲಿ ಪರಿಷ್ಕರಿಸಿರುವ ಕಂದಾಯವನ್ನು ಸ್ಥಿರೀಕರಿಸಲಾಗಿರುತ್ತದೆ.

ಸದರಿ ಆದೇಶದ ವಿರುದ್ಧ ತೆರಿಗೆ, ಆರ್ಥಿಕ ಮತ್ತು ಮೇಲ್ಮನವಿ ಸ್ಥಾಯಿ ಸಮಿತಿಯ ಮುಂದೆ ಅರ್ಜಿಯನ್ನು ಸಲ್ಲಿಸಲಾಗಿದ್ದು, ಸದರಿ ಸಮಿತಿಯು ದಿನಾಂಕ: 26.11.1998ರ ನಡವಳಿಗಳು ವಿಷಯದ ಸಂಖ್ಯೆ: ತೆ.ಮೇ./14/97-98ರ ಪ್ರಕಾರ ಮೆ|| ರಾಜಾ ಎಂಟರ್ ಪ್ರೈಸಸ್, ನಂ. 51, ಸಜ್ಜನ್‌ರಾವ್ ರಸ್ತೆ, ವಿ.ವಿ.ಪುರಂ, ಬೆಂಗಳೂರು ರವರು ದಿನಾಂಕ: 24.07.1997 ರಂದು ಪ್ರಥಮ ಅಪೀಲು ಅಧಿಕಾರಿಗಳು ಮಾಡಿರುವ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲಾಗಿದ್ದು ಈ ಬಗ್ಗೆ ಉಪ ಆಯುಕ್ತರು (ದಕ್ಷಿಣ) ರವರು ದಿನಾಂಕ: 20.06.1997 ರಂದು ಸಮಿತಿಯ ತೀರ್ಮಾನಕ್ಕಾಗಿ ಟಿಪ್ಪಣಿಯನ್ನು ಮಂಡಿಸಲಾಗಿದ್ದು, ಮನವಿದಾರರ ಹೇಳಿಕೆಯು ಸಮಂಜಸವಾಗಿ ಕಂಡುಬರದ ಕಾರಣ ಮನವಿದಾರರ ಮನವಿಯಲ್ಲಿನ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ತರುವಾಯ ಸದರಿ ಪ್ರಕರಣದಲ್ಲಿ ನಿಗಧಿಪಡಿಸಿರುವ ವಾರ್ಷಿಕ ಬಾಡಿಗೆ ಮೌಲ್ಯವು ಸಮಂಜಸವಾಗಿ ಕಂಡು ಬಂದಿರುವುದರಿಂದ ಸ್ಥಿರೀಕರಿಸಲಾಗಿರುತ್ತದೆ.

ಆದುದರಿಂದ ಈ ಸಂಬಂಧ, ನಗರ ಪಾಲಿಕೆಗೆ 1991-92ನೇ ಸಾಲಿನಿಂದ 1998-99ನೇ ಸಾಲಿನವರೆಗೆ ಬಾಕಿ ಇದ್ದ ರೂ. 31,62,580/-ಗಳ ಪೈಕಿ ನಗರ ಪಾಲಿಕೆಗೆ ಈಗಾಗಲೇ ಪಾವತಿ ಮಾಡಿರುವ ರೂ. 4,95,989.50/-ಗಳನ್ನು ಹೊರತು ಪಡಿಸಿ ರೂ. 26,71,594.90/-ಗಳನ್ನು ಪಾವತಿಸಲು ದಿನಾಂಕ: 23.12.1998ರಲ್ಲಿ ತಿಳುವಳಿಕೆ ಪತ್ರದ ಮುಖಾಂತರ ತಿಳಿಸಲಾಗಿದ್ದು, ಈ ಹಿನ್ನೆಲೆಯಲ್ಲಿ 1991-92 ರಿಂದ 1998-99ರ ವರೆಗೆ ರೂ. 26,71,594.90/-ಗಳು ಬಾಕಿ ಇದ್ದು, ಕೇವಲ ರೂ. 51,896/-ಗಳನ್ನು ಪಾವತಿ ಮಾಡಿರುವುದು ಸಮ್ಮತವಲ್ಲವೆಂದು ದಿನಾಂಕ: 22.12.1998ರಂದು ಪೇ ಆರ್ಡರ್ ಅನ್ನು ಸ್ವತ್ತಿನ ಮಾಲೀಕರಿಗೆ ಹಿಂದಿರುಗಿಸಲಾಗಿರುತ್ತದೆ.

ಮೆ|| ರಾಜಾ ಎಂಟರ್ ಪ್ರೈಸಸ್ ನಂ. 51, ಸಜ್ಜನ್‌ರಾವ್ ರಸ್ತೆ, ವಿ.ವಿ.ಪುರಂ, ಬೆಂಗಳೂರು ರವರು ಸಹಾಯಕ ಕಂದಾಯ ಅಧಿಕಾರಿ ಬಿಬಿಎಂಪಿ ಮತ್ತು ಇತರರ ವಿರುದ್ಧ ಆಸ್ತಿ ತೆರಿಗೆ ಸಂಬಂಧ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದ್ದು, ಈ ಪ್ರಕರಣವನ್ನು ಘನ ನ್ಯಾಯಾಲಯವು ಮೇಲ್ಮನವಿ ಸ್ಥಾಯಿ ಸಮಿತಿಯಲ್ಲಿ ತೀರ್ಮಾನ ಕೈಗೊಳ್ಳಲು ಆದೇಶ ನೀಡಲಾಗಿರುವ ಹಿನ್ನೆಲೆಯಲ್ಲಿ ಮೆ|| ರಾಜಾ ಎಂಟರ್ ಪ್ರೈಸಸ್‌ನ ಪ್ರತಿನಿಧಿಯಾದ ಮ್ಯಾನೇಜಿಂಗ್ ಪಾರ್ಟನರ್ ಶ್ರೀ. ರಾಜಾದತ್ತ ಕುಮಾರ್ ರವರಿಗೆ ಸ್ವತ್ತಿನ ಸಂಖ್ಯೆ: 51, ಸಜ್ಜನ್‌ರಾವ್ ರಸ್ತೆ, ವಿ.ವಿ.ಪುರಂ, ಬೆಂಗಳೂರು, ವಾರ್ಡ್-143 ರ ಸ್ವತ್ತಿನ ಆಸ್ತಿ ತೆರಿಗೆ ಪಾವತಿಸುವ ಬಗ್ಗೆ ಪ್ರಕರಣ ಸಂಖ್ಯೆ: ಡಬ್ಲ್ಯೂ.ಪಿ. ನಂ. 12757/08 (ಎಲ್.ಬಿ.-ಬಿಎಂಪಿ) ಪ್ರಕರಣದಲ್ಲಿ ಇತ್ಯರ್ಥವಾದ ನ್ಯಾಯಾಲಯದ ಆದೇಶದನ್ವಯ ಸದರಿ ಸ್ವತ್ತಿನ ಆಸ್ತಿ ತೆರಿಗೆಯನ್ನು 1991-92 ರಿಂದ 2007-08ರ ವರೆಗೆ ರೂ. 55,64,881/- ಶೇ. 5% ರಷ್ಟು ಬಡ್ಡಿಯಂತೆ ಪಾವತಿಸಲು ದಿನಾಂಕ: 12.10.2011ರಂದು ಹಿಂಬರಹ ನೀಡಲಾಗಿದ್ದು, ಈ ಹಿಂಬರಹಕ್ಕೆ ಸದರಿಯವರು ದಿನಾಂಕ: 03.07.2012 ರಂದು ಅರ್ಜಿ ಸಲ್ಲಿಸಿ ಸದರಿ ಪ್ರಕರಣದ ಆದೇಶದನ್ವಯ ತೆರಿಗೆ ಮತ್ತು ಮೇಲ್ಮನವಿ ಸ್ಥಾಯಿ ಸಮಿತಿಯು ತೀರ್ಮಾನ ಕೈಗೊಳ್ಳಲು ಕೋರಿಕೊಂಡಿರುತ್ತಾರೆ.

ಸದರಿಯವರು ಪಾಲಿಕೆಗೆ ಪಾವತಿಸಬೇಕಾಗಿರುವ ರೂ. 55,64,881/- ಮತ್ತು ಶೇ. 5% ರಷ್ಟು ಬಡ್ಡಿ ಸಮೇತ ಪಾವತಿಸಲು ಸೂಚಿಸಿ ನೋಟಿಸ್ ಜಾರಿ ಮಾಡಿದ್ದು, ನಂತರ ಸದರಿ ಆಸ್ತಿ ಮಾಲೀಕರು ಯಾವುದೇ ತೆರಿಗೆಯನ್ನು ಪಾವತಿಸಿಲ್ಲವಾದ ಕಾರಣ ಹಾಗೂ ಆಸ್ತಿ ತೆರಿಗೆಯನ್ನು ಬಾಕಿ ಉಳಿಸಿಕೊಂಡಿದ್ದು, ಈ ಬಗ್ಗೆ ಪ್ರಕರಣ ಸಂಖ್ಯೆ: ಡಬ್ಲ್ಯೂ.ಪಿ. 1257/08 (ಎಲ್.ಬಿ.-ಬಿಎಂಪಿ) ರ ಪ್ರಕರಣ, ದಿನಾಂಕ: 15.07.2010ರಲ್ಲಿ ಇತ್ಯರ್ಥಗೊಂಡಿದ್ದು, ನ್ಯಾಯಾಲಯದ ಆದೇಶದ ರೀತ್ಯಾ ಅರ್ಜಿದಾರರು ನೀಡಿರುವ ಮೇಲ್ಮನವಿಯನ್ನು ಅಪೀಲು ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.,

ಪ್ರಕರಣವನ್ನು ಕರೆಯಲಾಯಿತು ಮನವಿದಾರರು ಗೈರುಹಾಜರಾಗಿದ್ದು ಪ್ರತಿವಾದಿ ಶ್ರೀ.ಲಿಂಗಯ್ಯ ಸಹಾಯಕ ಕಂದಾಯ ಅಧಿಕಾರಿಯವರು ಹಾಜರಾಗಿದ್ದು, ಪ್ರಕರಣವನ್ನು ಮುಂದೂಡಿದೆ.

**ವಿಷಯ:ಸಂಖ್ಯೆ:ಅಸ್ಥಾಸ/(ಜಾ)/01/2013-14** ಜಂಟಿ ಆಯುಕ್ತರು(ಜಾ) ಇವರು ದಿನಾಂಕ;15-5-13 ರ ಟಿಪ್ಪಣಿಯ ರೀತ್ಯಾ ಮೆ॥ ಪ್ರಕಾಶ್ ಆರ್ಟ್ಸ್ ಸಂಸ್ಥೆಯವರಿಗೆ ಪ್ಯಾಕೇಜ್-01 ರಲ್ಲಿ ನಗರ ಪಾಲಿಕೆಯ 1) ಕಮರ್ಷಿಯಲ್ ಸ್ಟ್ರೀಟ್‌ನಲ್ಲಿ 12 ಸಂಖ್ಯೆ 2) ಬ್ರಿಗೇಡ್ ರಸ್ತೆ : ಎಂ.ಜಿ.ರಸ್ತೆ ಜಂಕ್ಷನ್‌ನಿಂದ ಬ್ರಿಗೇಡ್ ರಸ್ತೆ ಜಂಕ್ಷನ್‌ವರೆಗೂ 11 ಸಂಖ್ಯೆ 3)ಇಂದಿರಾನಗರ ಬಿ.ಡಿ.ಎ. ಕಾಂಪ್ಲೆಕ್ಸ್‌ವರೆಗೆ 21 ಸಂಖ್ಯೆ ಒಟ್ಟು 44 ಸಂಖ್ಯೆಯ ಹೂ ಕುಂಡಗಳನ್ನು ಪಾದಚಾರಿ ರಸ್ತೆಯ ವಿದ್ಯುತ್ ಕಂಬಗಳ ಮೇಲೆ 2X3 (2ಕಡೆ) ಅಡಿ ಅಳತೆಯಲ್ಲಿ ಒಂದು ಕಡೆ ಪಾಲಿಕೆಯ ಸಾಮಾಜಿಕ ಸಂದೇಶ ಇನ್ನೊಂದು ಕಡೆ ವಾಣಿಜ್ಯ ಜಾಹೀರಾತು ಪ್ರದರ್ಶಿಸಲು ದಿನಾಂಕ :05.12.2009ರಂದು ಕರಾರು ಪತ್ರ ಮಾಡಿ ಮೂರು ವರ್ಷಗಳ ಅವಧಿಗೆ ಹಾಗೂ ಕರಾರು ಪತ್ರದಂತೆ 60 ದಿವಸಗಳ ಕಾಲಾವಕಾಶವನ್ನು ನೀಡಿ ದಿನಾಂಕ:05.02.2010 ರಿಂದ 04.02.2013ರವರೆಗೆ ಅನ್ವಯವಾಗುವಂತೆ ಅನುಮತಿ ನೀಡಲಾಗಿರುತ್ತದೆ.

ಸದರಿ ಸಂಸ್ಥೆಯವರು ದಿನಾಂಕ:17.02.2010ರಂದು ಈ ಕಛೇರಿಗೆ ಪತ್ರವನ್ನು ಸಲ್ಲಿಸಿ ಪ್ಯಾಕೇಜ್-01ರಲ್ಲಿ ಹಂಚಿಕೆಯಾಗಿದ್ದ ಹೂ ಕುಂಡಗಳನ್ನು ದಿನಾಂಕ:12.02.2010 ಮತ್ತು 14.02.2010 ರಂದು 11 ಸಂಖ್ಯೆಯ ಹೂ ಕುಂಡಗಳು ಕಳವು ಆಗಿರುವುದಾಗಿ ಹಾಗೂ ಬ್ರಿಗೇಡ್ ರಸ್ತೆಯ ಮಾಲೀಕರ ಸಂಘದವರು ಹೂ ಕುಂಡಗಳನ್ನು ಅಳವಡಿಸಬಾರದೆಂದು ಆಕ್ಷೇಪಣೆ ವ್ಯಕ್ತಪಡಿಸಿದ್ದು ಹಾಗೂ ಕಳವು ಆಗಿರುವ ಹೂ ಕುಂಡಗಳ ಮೊತ್ತವು ರೂ.3,00,000/-ಗಳಾಗುತ್ತದೆ. ಆದ್ದರಿಂದ ಈ ಸಮಸ್ಯೆಯು ಇತ್ಯರ್ಥವಾಗುವವರೆಗೂ ಈಗಿರುವ 60 ದಿವಸಗಳ ಕಾಲವಕಾಶವನ್ನು ವಿಸ್ತರಿಸಲು ಕೋರಿರುತ್ತಾರೆ.ಸದರಿಯವರ ಮನವಿ ಮೇರೆಗೆ ಸ್ಥಳ ಪರಿಶೀಲಿಸಲಾಗಿದ್ದು, ಸದರಿಯವರಿಗೆ ಹಂಚಿಕೆಯಾಗಿದ್ದ ರಸ್ತೆಗಳ ಪೈಕಿ ಇಂದಿರಾನಗರ ಬಿ.ಡಿ.ಎ. ಕಾಂಪ್ಲೆಕ್ಸ್ ರಸ್ತೆಯಲ್ಲಿ 21 ಸಂಖ್ಯೆಯು ಹೂ ಕುಂಡಗಳು ಹಂಚಿಕೆಯಾಗಿದ್ದು, ಆದರೆ ಸದರಿಯವರು 4 ಸಂಖ್ಯೆಯ ಹೂ ಕುಂಡಗಳನ್ನು ಹೆಚ್ಚಿಗೆ ಅಳವಡಿಸಿ ಮತ್ತು ವಿಸ್ತೀರ್ಣ 2X3=6X2=12.00 ಚದರ ಅಡಿಗಳ ಬದಲಾಗಿ 15 ಚದರ ಅಡಿ ಅಳತೆಯ ವಿಸ್ತೀರ್ಣವುಳ್ಳ ಹೂ ಕುಂಡಗಳನ್ನು ಅಳವಡಿಸಿರುತ್ತಾರೆ.

ಹಂಚಿಕೆಯಾಗಿದ್ದ ಹೂ ಕುಂಡಗಳ ವಿಸ್ತೀರ್ಣಕ್ಕಿಂತ 3 ಚದರ ಅಡಿ ಹೆಚ್ಚಿಗೆ ಅಳವಡಿಸಿ ಹಾಗೂ ಕರಾರುಪತ್ರದಂತೆ ನಿರ್ವಹಣೆ ಮಾಡದೇ ಇರುವುದು ಕಂಡು ಬಂದಿದ್ದ ಹಿನ್ನೆಲೆಯಲ್ಲಿ ಕರಾರುಪತ್ರ ಉಪವಾಕ್ಯ 25 ಎ ಮತ್ತು ಬಿ ರಂತೆ ಒಂದನೇ ಉಲ್ಲಂಘನೆಯಂತೆ 5000ಥ48=2,40,000/-ಗಳು ಎರಡನೇ ಉಲ್ಲಂಘನೆಯಂತೆ 10000ಥ48=4,80,000/-ಗಳು ಹಾಗೂ ಕರಾರುಪತ್ರ ಉಪವಾಕ್ಯ 25 ಬಿ ರಂತೆ 48 ಹೂ ಕುಂಡಗಳಿಗೆ 5,000/-ರಂತೆ ರೂ.2,40,000/-ಗಳು ಸೇರಿ ಒಟ್ಟು ರೂ.9,60,000/-ಗಳ ದಂಡವನ್ನು ವಿಧಿಸಿ ಈ ಮೊತ್ತವನ್ನು ಪಾವತಿಸುವಂತೆ ದಿನಾಂಕ:24.09.2010, 12.10.2010 ಮತ್ತು 29.11.2010ರಂದು ನೋಟೀಸ್ ಜಾರಿಮಾಡಲಾಗಿರುತ್ತದೆ. ಸದರಿ ಸಂಸ್ಥೆಯವರು ಈ ಮೊತ್ತವನ್ನು ಪಾವತಿಸದೇ ದಿನಾಂಕ:24.09.2010 ರಂದು ನೀಡಿರುವ ಈ ಕಛೇರಿಯ ನೋಟೀಸ್ ವಿರುದ್ಧ ನಗರ ಪಾಲಿಕೆಯ ಅಪೀಲುಗಳ ಸ್ಥಾಯಿ ಸಮಿತಿಯಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಇವರ ಮನವಿಯನ್ನು ವಜಾ ಮಾಡವಂತೆ ಕೋರಿ ಅಪೀಲುಗಳ ಸ್ಥಾಯಿ ಸಮಿತಿಯ ಮುಂದೆ ನಿರ್ಣಯಕ್ಕಾಗಿ ಕಡತವನ್ನು ಕಳುಹಿಸಿಕೊಡಲಾಗಿರುತ್ತದೆ.

ದಿನಾಂಕ:24.03.2012ರಂದು ಅಪೀಲುಗಳ ಸ್ಥಾಯಿ ಸಮಿತಿಯ ನಿರ್ಣಯವು ಈ ಕೆಳಕಂಡಂತಿರುತ್ತದೆ:

"ಟೆಂಡರ್ ನಿಬಂಧನೆಗಳಂತೆ ಟೆಂಡರ್ ಕಂ ಹರಾಜು ನಡೆಸಿದ ತಕ್ಷಣ ಕರಾರು ಪತ್ರ ಮಾಡಿಕೊಳ್ಳದಿರುವುದು ಆಯುಕ್ತರ ಟಿಪ್ಪಣಿಯಿಂದ ಕಂಡು ಬರುತ್ತದೆ. ಅಲ್ಲದೆ ಮೇಲ್ಮನವಿದಾರರಿಗೆ ನಷ್ಟವುಂಟಾಗಿರುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕಾಲಕಾಲಕ್ಕೆ ತಿಳಿಸಿರುವುದು ಕಂಡು ಬರುತ್ತದೆ. ಇಂದಿರಾನಗರ ಬಿ.ಡಿ.ಎ ಕಾಂಪ್ಲೆಕ್ಸ್ ಹತ್ತಿರ ವಿದ್ಯುತ್ ಸರಬರಾಜನ್ನು ನೀಡದಿರುವುದರಿಂದ ಮೇಲ್ಮನವಿದಾರರಿಗೆ ಆರ್ಥಿಕ ನಷ್ಟವುಂಟಾಗಿರುವುದು ಸ್ಪಷ್ಟವಾಗಿರುತ್ತದೆ. ಈ ಎಲ್ಲಾ ಕಾರಣಗಳಿಂದಾಗಿ ಮೆ॥ ಪ್ರಕಾಶ್ ಆರ್ಟ್ಸ್ ಸಂಸ್ಥೆಯವರಿಗೆ ಈಗ ವಿಧಿಸಿರುವ ರೂ.9,60,000/-ಗಳ ದಂಡದ ಬದಲಿಗೆ ರೂ.2,50,000/-ಗಳ

ದಂಡವನ್ನು ವಿಧಿಸಿ ಬ್ರಿಗೇಡ್ ರಸ್ತೆಯ ಹೂ ಕುಂಡಗಳನ್ನು ಕಿತ್ತು ಹಾಕಿ ಅವಧಿ ಮತ್ತು ಅಳವಡಿಸಲು ತೆಗೆದುಕೊಂಡ ಅವಧಿಗೆ ಸಮನಾಗಿ 2 ತಿಂಗಳ ಅವಧಿಯನ್ನು ಮುಂದುವರೆಸಲು ಆಯುಕ್ತರು ಕ್ರಮ ತೆಗೆದುಕೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಗಿರುತ್ತದೆ."

ಅಪೀಲುಗಳ ಸ್ಥಾಯಿ ಸಮಿತಿಯ ತೀರ್ಮಾನ ಕೈಗೊಂಡಿರುವುದಕ್ಕೆ ಸಮಂಜಸವಾದ ಕಾರಣಗಳು ಕಂಡುಬರುತ್ತಿಲ್ಲವಾದ್ದರಿಂದ ಕೆ.ಎಂ.ಸಿ. ಕಾಯ್ದೆ–1976ರ ಕಲಂ 98 ರಂತೆ ದಿನಾಂಕ:24.03.2012ರ ಅಪೀಲುಗಳ ಸ್ಥಾಯಿ ಸಮಿತಿಯ ನಿರ್ಣಯವನ್ನು ರದ್ದುಪಡಿಸುವಂತೆ ಸರ್ಕಾರವನ್ನು ಕೋರಲಾಗಿತ್ತು. ಈ ಸಂಬಂಧ ಸರ್ಕಾರದ ಪತ್ರದ ಸಂ: ನಅಇ 259 ಎಂಎನ್‌ಯು 2012 ದಿನಾಂಕ:10.09.2012 ಮತ್ತು 01.03.2013 ರ ಪತ್ರದಲ್ಲಿ ಅಪೀಲು ಸ್ಥಾಯಿ ಸಮಿತಿಯು ದಿನಾಂಕ:24.03.2012ರಂದು ತೆಗೆದುಕೊಂಡಿರುವ ನಿರ್ಣಯವನ್ನು ಏಕೆ ರದ್ದುಗೊಳಿಸಬಾರದು? ಎಂಬುದಕ್ಕೆ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ–1976 ಕಲಂ 98 (2) ರನ್ವಯ ಕಾರಣ ಕೇಳಿ ನೋಟೀಸ್ ಜಾರಿ ಮಾಡಿದ್ದು, ಈ ನೋಟೀಸ್‌ಗೆ ಸಮಿತಿಯ ಹೇಳಿಕೆ/ಸಮಜಾಯಿಷಿಗಳೇನಾದರೂ ಇದ್ದಲ್ಲಿ ಲಿಖಿತವಾಗಿ ವರದಿ ನೀಡುವಂತೆ ಕೋರಿರುವ ಮೇರೆಗೆ ಹೇಳಿಕೆ/ಸಮಜಾಯಿಷಿ ನೀಡುವ ಬಗ್ಗೆ ಅಪೀಲು ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿ ಮಂಡಿಸಿದೆ.

ಪ್ರಕರಣವನ್ನು ಕರೆಯಲಾಯಿತು ಮನವಿದಾರರು ಗೈರುಹಾಜರಾಗಿದ್ದು ಪ್ರತಿವಾದಿ ಹಾಜರಾಗಿದ್ದು ಆದುದರಿಂದ ಪ್ರಕರಣವನ್ನು ಮುಂದೂಡಿದೆ.

**<u>ವಿಷಯ:ಸಂಖ್ಯೆ:ಅಸ್ಥಾಸ/(ಆ)/02/2013–14</u>** ಆಯುಕ್ತರ ರವರು ದಿನಾಂಕ: 28/3/13ರ ಟಿಪ್ಪಣಿ ರೀತ್ಯಾ

ಶ್ರೀ ಎಸ್. ದಿವಾಕರ್ ರಾವ್ ಎಂಬುವರು ಉಪ ಆರೋಗ್ಯಾಧಿಕಾರಿ (ಪೂರ್ವ) ರವರ ಕಛೇರಿಗೆ ಅರ್ಜಿ ಸಲ್ಲಿಸಿ ಇವರ ಹೆಸರಿನಲ್ಲಿ ದಕ್ಷಿಣ/ಉತ್ತರ, ಭಾರತದ ತಿಂಡಿ ತಿನಿಸುಗಳ ಮಾರಾಟ ಮತ್ತು ಐಸ್ ಕ್ರೀಂ ಪಾರ್ಲರ್ ನಡೆಸುವುದಕ್ಕೆ ಹೊಸ ಪರವಾನಿಗೆ ಕೋರಿದ್ದು, ಇದಕ್ಕೆ ಸಂಬಂದಿಸಿದ ದಾಖಲೆಗಳನ್ನು ಸಲ್ಲಿಸಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿದಾಗ ಇವರು ನೀಡಿರುವ ಅರ್ಜಿಯಲ್ಲಿ ಮಾಲೀಕರ ಸಹಿ ಇಲ್ಲದೆ ಇರುವುದು ಕಂಡುಬಂದಿದ್ದು ಇದರ ಬಗ್ಗೆ ಅರ್ಜಿದಾರರಿಗೆ 20–04–2012 ರಂದು ಹಿಂಬರಹ ನೀಡಲಾಗಿರುತ್ತದೆ. ಅಲ್ಲದೆ ಸದರಿ ವಿಳಾಸದಲ್ಲಿ ಈಗಾಗಲೇ ಬೋರ್ಡಿಂಗ್ & ಲಾಡ್ಜಿಂಗ್ ಉದ್ದಿಮೆಗೆ ಶ್ರೀ ಕುರಿಯನ್ ಥಾಮಸ್ (ಇಂಡಿಯನ್ ವುಡ್ ಇಂಡಸ್ಟ್ರೀಸ್ ಸಂಸ್ಥೆಯ ಮಾಲೀಕರು) ಎಂಬುವರ ಹೆಸರಿನಲ್ಲಿ ಪಾಲಿಕೆಯಿಂದ ಪರವಾನಿಗೆಯನ್ನು ನೀಡಿದ್ದು, ಇದನ್ನು 31–03–2012 ರ ವರೆಗೆ ನವೀಕರಿಸಲಾಗಿರುತ್ತದೆ.

ಶ್ರೀ ಕುರಿಯನ್ ಥಾಮಸ್ ರವರು ಆಕ್ಷೇಪಣಾ ಅರ್ಜಿ ಸಲ್ಲಿಸಿ ಇವರ ಹೆಸರಿನಲ್ಲಿರುವ ಉದ್ದಿಮೆಯನ್ನು 2012–13ನೇ ಸಾಲಿಗೆ ನವೀಕರಿಸಬಾರದು ಹಾಗು ಈ ವಿಳಾಸದಲ್ಲಿ ಇತರೇ ಯಾವುದೇ ವ್ಯಕ್ತಿಗೂ ಯಾವುದೇ ರೀತಿಯ ಉದ್ದಿಮೆ ನಡೆಸುವ ಸಲುವಾಗಿ ಪರವಾನಿಗೆಯನ್ನು ನೀಡಬಾರದೆಂದು ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ಉದ್ದಿಮೆಯ ಪರವಾನಿಗೆಯ ಬಗ್ಗೆ ಕಾನೂನು ಕೋಶದ ಅಭಿಪ್ರಾಯ ಕೋರಲಾಗಿ ಸದರಿ ಅರ್ಜಿದಾರರಾದ ಶ್ರೀ ಎಸ್. ದಿವಾಕರ್ ರಾವ್ ರವರ ಮನವಿಯನ್ನು ತಿರಸ್ಕರಿಸಬಹುದಾಗಿದೆ ಎಂದು ಅಭಿಪ್ರಾಯ ನೀಡಿರುತ್ತಾರೆ ಹಾಗೂ ದಿನಾಂಕ: 07–07–2012 ರಂದು ಉಪ ಆರೋಗ್ಯಾಧಿಕಾರಿ (ಪೂರ್ವ) ರವರ ಕಛೇರಿಯಿಂದ ರೀತ್ಯಾ ಅರ್ಜಿದಾರರಿಗೆ ಹಿಂಬರಹ ನೀಡಲಾಗಿದೆ.

ಮುಂದುವರೆದಂತೆ, ಜಂಟಿ ಆಯುಕ್ತರು (ಪೂರ್ವ) ರವರು ಸದರಿ ವಿಷಯದ ಬಗ್ಗೆ ವಿಚಾರಣೆ ನಡೆಸಲು ವಾದಿ ಮತ್ತು ಪ್ರತಿವಾದಿಗಳಿಗೆ ವಿಚಾರಣೆ ನೋಟಿಸ್ ಜಾರಿ ಮಾಡಿರುತ್ತಾರೆ. ತದನಂತರ, ವಿಚಾರಣೆ ನಡೆಸಿ, ವಾದಿ ಮತ್ತು ಪ್ರತಿವಾದಿಗಳು ಸಲ್ಲಿಸಿರುವ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಿ ಅಂತಿಮವಾಗಿ ದಿನಾಂಕ: 04–12–2012 ರಂದು ಆದೇಶವನ್ನು ಪ್ರಕಟಿಸಿರುತ್ತಾರೆ. ಸದರಿ ಆದೇಶದಲ್ಲಿ ಅರ್ಜಿದಾರರಾದ ಶ್ರೀ ಎಸ್. ದಿವಾಕರ್ ರಾವ್ ರವರು ಏರ್‌ಲೈನ್ ಹೋಟೆಲ್ ಉದ್ದಿಮೆಯ ಪರವಾನಿಗೆಯನ್ನು 2012–13 ನೇ ಸಾಲಿಗೆ ನವೀಕರಿಸಲು ಕೋರಿರುವ ಮನವಿಯನ್ನು ತಿರಸ್ಕರಿಸಲಾಗಿರುತ್ತದೆ. ಸದರಿ ಆದೇಶದ ಪ್ರತಿಯನ್ನು ಅರ್ಜಿದಾರರಾದ ಶ್ರೀ ಎಸ್. ದಿವಾಕರ್ ರಾವ್ ರವರಿಗೆ ದಿನಾಂಕ: 08–01–2013 ರಂದು ನೋಂದಣಿ ಅಂಚೆ ಮುಖಾಂತರ ಕಳುಹಿಸಲಾಗಿರುತ್ತದೆ ಹಾಗೂ ಖುದ್ದಾಗಿ ನೀಡಿ ಸ್ವೀಕೃತಿ ಪಡೆಯಲಾಗಿರುತ್ತದೆ.

ಟಿಪ್ಪಣಿ ಸಂಖ್ಯೆ: ಅಸ್ಥಾಸ/ಪಿಆರ್/70/2012–13, ದಿನಾಂಕ: 22–12–2012. ರಲ್ಲಿ ಅಪೀಲುಗಳ ಸ್ಥಾಯಿ ಸಮಿತಿಯ ಅಧ್ಯಕ್ಷರು ತಮ್ಮ ಟಿಪ್ಪಣಿಯಲ್ಲಿ ಜಂಟಿ ಆಯುಕ್ತರು ದಿನಾಂಕ: 04–12–2012 ರಂದು ನೀಡಿರುವ ಆದೇಶದ ವಿರುದ್ಧ ಶ್ರೀ ದಿವಾಕರ್ ರಾವ್ ಮಾಲೀಕರು, ಏರ್‌ಲೈನ್ಸ್ ಹೋಟೆಲ್, ನಂ 41, ಮದ್ರಾಸ್ ಬ್ಯಾಂಕ್ ರಸ್ತೆ, ಶಾಂತಿನಗರ, ಬೆಂಗಳೂರು–560001, ಇವರು ಅಪೀಲು ಸ್ಥಾಯಿ ಸಮಿತಿಯಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಈ ವಿಷಯಕ್ಕೆ ಸಂಬಂಧಪಟ್ಟ ಕಡತ ಹಾಗೂ ವಿವರವಾದ ಟಿಪ್ಪಣಿಯೊಂದಿಗೆ ಸಮಿತಿಯ ಮುಂದೆ ಮಂಡಿಸಲು ಕೋರಿರುತ್ತಾರೆ. ಅದರಂತೆ ಸದರಿ ವಿಷಯದ ಮೂಲ ಕಡತವನ್ನು ಟಿಪ್ಪಣಿಯೊಂದಿಗೆ ಅಪೀಲು ಸ್ಥಾಯಿ ಸಮಿತಿಗೆ ಮಂಡಿಸಲಾಗಿರುತ್ತದೆ.

ಈ ಮಧ್ಯೆ ದಿನಾಂಕ: 16–01–2013, ಅಪೀಲು ಸ್ಥಾಯಿ ಸಮಿತಿಯ ಟಿಪ್ಪಣಿಯಲ್ಲಿ ಉಪ–ಆರೋಗ್ಯಾಧಿಕಾರಿ (ಪೂರ್ವ) ರವರ ಹಿಂಬರಹಕ್ಕೆ ತಾತ್ಕಾಲಿಕವಾಗಿ ತಡೆಯಾಜ್ಞೆಯನ್ನು ನೀಡುತ್ತಾ, ಸಂಬಂಧಪಟ್ಟ ಮೂಲ ಕಡತವನ್ನು ಸವಿವರವಾದ ಟಿಪ್ಪಣಿಯೊಂದಿಗೆ ಸೂಕ್ತ ತೀರ್ಮಾನಕ್ಕಾಗಿ ಸಮಿತಿಯ ಮುಂದೆ ಮಂಡಿಸಲು ಹಾಗೂ ಒಂದು ಪಕ್ಷ ಕಡತವನ್ನು ಮಂಡಿಸುವಲ್ಲಿ ವಿಳಂಭವಾದ ಪಕ್ಷದಲ್ಲಿ ನಿಯಮಾನುಸಾರ

2013–14ನೇ ಸಾಲಿನ ಪರವಾನಿಗೆ ಶುಲ್ಕವನ್ನು ಪಾಲಿಕೆಯ ಆರ್ಥಿಕ ದೃಷ್ಟಿಯಿಂದ ಪಡೆದುಕೊಳ್ಳುವಂತೆ ಸಂಬಂಧಪಟ್ಟವರಿಗೆ ಸೂಕ್ತ ಆದೇಶ ನೀಡುವಂತೆ ಮಾನ್ಯ ಆಯುಕ್ತರಲ್ಲಿ ಕೋರಿರುತ್ತಾರೆ.

ತದ ನಂತರ ದಿನಾಂಕ: 01–03–2013 ರಂದು ಶ್ರೀ ಕುರಿಯನ್ ಥಾಮಸ್, ಮಾಲೀಕರು ಇಂಡಿಯನ್ ವುಡ್ ಮತ್ತು ಇಂಡಸ್ಟ್ರಿಯಸ್ ರವರು ಅಫೀಲು ಸ್ಥಾಯಿ ಸಮಿತಿಯಲ್ಲಿ ಮೇಲ್ಮನವಿ ಸಲ್ಲಿಸಿ, ಅಫೀಲು ಸ್ಥಾಯಿ ಸಮಿತಿಯ ತಾತ್ಕಾಲಿಕ ತಡೆಯಾಜ್ಞೆಯನ್ನು ಹಿಂದಕ್ಕೆ ಪಡೆಯುವಂತೆ ಕೋರಿರುತ್ತಾರೆ. ದಿನಾಂಕ: 05–03–2013 ಮತ್ತು 15–03–2013 ರ ಅಧ್ಯಕ್ಷರು, ಅಫೀಲು ಸ್ಥಾಯಿ ಸಮಿತಿಯವರ ಟಿಪ್ಪಣಿಯಲ್ಲಿ ದಿನಾಂಕ: 01–03–2013 ರಲ್ಲಿ ಶ್ರೀ.ಕುರಿಯನ್ ಥಾಮಸ್ ರವರು ನೀಡಿರುವ ಮೇಲ್ಮನವಿ ಬಗ್ಗೆ ಮೂಲ ಕಡತವನ್ನು ದಾಖಲೆಗಳೊಂದಿಗೆ ಪರಿಶೀಲಿಸಿ ಸಮಿತಿಯ ಮುಂದೆ ಮಂಡಿಸಲು ಕೋರಿ ದಿನಾಂಕ: 21–03–2013 ರಂದು ಆರೋಗ್ಯಾಧಿಕಾರಿ(ಪೂರ್ವ) ರವರ ಕಛೇರಿಗೆ ಮೂಲ ಕಡತವನ್ನು ಕಳುಹಿಸಿರುತ್ತಾರೆ. ಅದರಂತೆ ಮೇಲ್ಕಂಡ ಟಿಪ್ಪಣಿಯನ್ನು ತಯಾರಿಸಿ ಅಫೀಲು ಸ್ಥಾಯಿ ಸಮಿತಿಯ ಅವಗಾಹನೆಗೆ ಮಂಡಿಸಿದೆ.

ಪ್ರಕರಣವನ್ನು ಕರೆಯಲಾಯಿತು ಮನವಿದಾರರು ಹಾಗೂ ಅವರ ವಕೀಲರು, ಪ್ರತಿವಾದಿಗಳು ಹಾಜರಾಗಿದ್ದರು. ಶ್ರೀ ಎಸ್. ದಿವಾಕರ್ ರಾವ್ ರವರ ವಕೀಲರು ಪ್ರಕರಣದ ಬಗ್ಗೆ ವಿವರಣೆ ನೀಡಲು ಕಾಲಾವಕಾಶ ಕೋರಿದ್ದರ ಮೇರೆಗೆ ಪ್ರಕರಣವನ್ನು ಮುಂದೂಡಿದೆ.

**ವಿಷಯ:ಸಂಖ್ಯೆ:ಅಸ್ಥಾಸ/(ತೆ)/03/2013–14** ಆಯುಕ್ತರವರು ದಿನಾಂಕ:5–7–2013ರ ಟಿಪ್ಪಣಿ ರೀತ್ಯಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಯಲಹಂಕ ವಲಯ ವ್ಯಾಪ್ತಿಯಲ್ಲಿರುವ ಜಕ್ಕೂರು ಗ್ರಾಮದ ಸರ್ವೆ ಸಂಖ್ಯೆ:104 ರಲ್ಲಿನ 2 ಎಕರೆ ಭೂಪರಿವರ್ತನೆ ಜಮೀನಿಗೆ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯ ರವರು ಖಾತೆ ನೊಂದಾಯಿಸಲು ಕೋರಿರುತ್ತಾರೆ. ಸದರಿ ಸ್ವತ್ತಿನ ವಿಸ್ತೀರ್ಣಕ್ಕೆ ಚ.ಮೀ.ಒಂದಕ್ಕೆ ರೂ.550ರಂತೆ ಒಟ್ಟು ಸುಧಾರಣಾ ವೆಚ್ಚ ರೂ.44.51.543 ಗಳನ್ನು ಪಾವತಿ ಮಾಡಲು ಸಹಾಯಕ ಕಂದಾಯ ಅಧಿಕಾರಿ (ಬ್ಯಾಟರಾಯನಪುರ) ಉಪವಿಭಾಗ ಕಛೇರಿಯಿಂದ ಹಿಂಬರಹ ನೀಡಲಾಗಿರುತ್ತದೆ. ವಿಶ್ವವಿದ್ಯಾಲಯದವರು ಸ್ವತ್ತಿನ ಖಾತೆ ನೊಂದಾಯಿಸುವ ಸಂಬಂಧ ಪಾಲಿಕೆಯಿಂದ ವಿಧಿಸುವ ಸುಧಾರಣಾ ವೆಚ್ಚ/ಆಸ್ತಿತೆರಿಗೆಯನ್ನು ಮನ್ನಾ ಮಾಡಲು ವಿನಂತಿಸಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ,1976ರ ಕರ್ನಾಟಕ ಪೌರ ನಿಗಮಗಳ ಕಾಯ್ದೆ ಕಲಂ 110ರ ಅಡಿಯಲ್ಲಿ ಸ್ವತ್ತಿನ ಆಸ್ತಿ ತೆರಿಗೆಯನ್ನು ಮನ್ನಾ ಮಾಡಲು ಮಾತ್ರ ಅವಕಾಶವಿರುತ್ತದೆ. ಆದರೆ ಸುಧಾರಣಾ ವೆಚ್ಚವನ್ನು ಮನ್ನಾ ಮಾಡಲು ಕಾಯ್ದೆಯಲ್ಲಿ ಅವಕಾಶವಿರುವುದಿಲ್ಲ ಎಂಬ ಅಂಶವನ್ನು ಗಮನಕ್ಕೆ ತರುತ್ತಾ, ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯ ರವರ ಮನವಿಯ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕೋರಿ ಅಪೀಲು ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿಯನ್ನು ಮಂಡಿಸಲಾಗಿದೆ.

ಪ್ರಕರಣವನ್ನು ಕರೆಯಲಾಯಿತು ಮನವಿದಾರರು ಗೈರುಹಾಜರಾಗಿದ್ದು ಪ್ರತಿವಾದಿ ಶ್ರೀ.ನಂಜಪ್ಪ ಕಂದಾಯ ಪರಿವೀಕ್ಷಕರು ಹಾಜರಾಗಿದ್ದು, ಪ್ರಕರಣವನ್ನು ಮುಂದೂಡಿದೆ.

**ವಿಷಯ:ಸಂಖ್ಯೆ:ಅಸ್ಥಾಸ/(ಕಂ)/06/2013–14** ಅಪರ ಆಯುಕ್ತರು(ದಕ್ಷಿಣ) ಇವರು ಮಂಡಿಸಿರುವ ಟಿಪ್ಪಣಿ ರೀತ್ಯಾ ಶ್ರೀಮಾನ್ ಮಾಧ್ವ ಸಂಘ ನಂ.51, 5ನೇ ಮುಖ್ಯರಸ್ತೆ ಚಾಮರಾಜಪೇಟೆ, ಬೆಂಗಳೂರು ವಾರ್ಡ್–143, ವಿಶ್ವೇಶ್ವರಪುರಂ, ಸ್ವತ್ತಿಗೆ ಸಂಬಂಧಿಸಿದಂತೆ ಮೇಲ್ಮನವಿ ಸ್ಥಾಯಿ ಸಮಿತಿ ದಿನಾಂಕ:26–06–2003ರಂದು ನಡೆದ ಸಭೆಯ ನಡವಳಿಗಳ ವಿಷಯ ಸಂಖ್ಯೆ ಅಸ್ಥಾಪ/ತೆ.ಅ/256/02–03ರಂದು ಸದರಿ ಸ್ವತ್ತಿನ ಆಸ್ತಿ ತೆರಿಗೆ ಈ ಹಿಂದೆ ವಸತಿಯೇತರ ವಾರ್ಷಿಕ ಮೌಲ್ಯ 98000 ರೂ ಗಳಿಂದ 125000 ರೂ ಗಳಿಗೆ ದಿನಾಂಕ:01–04–1995 ರಿಂದ ಅನ್ವಯಗೊಳಿಸಿ ಪರಿಷ್ಕರಿಸಲಾಗಿದ್ದು, ಇದನ್ನು ಪ್ರಥಮ ಆಫೀಲು ಅಧಿಕಾರಿ ರವರು ಸ್ವೀಕರಿಸಿರುತ್ತಾರೆ, ಇದರ ವಿರುದ್ದ ಶ್ರೀಮಾನ್ ಮಾದ್ವ ಸಂಘರವರು ಮಾನ್ಯ ಸಿವಿಲ್ ನ್ಯಾಯಾಲಯದ ಪ್ರಕರಣ ಸಂಖ್ಯೆ ಎಂ.ಎ.29/98/ರಲ್ಲಿ ಮಾನ್ಯ ಆಯುಕ್ತರು, ಸಹ ಕಂದಾಯ ಅಧಿಕಾರಿ ಬಸವನಗುಡಿ ಮತ್ತು ತೆರಿಗೆ ಮತ್ತು ಅಪೀಲು ಸ್ಥಾಯಿ ಸಮಿತಿ ರವರುಗಳ ವಿರುದ್ದ ಪ್ರಕರಣ ದಾಖಲಾಗಿದ್ದು, ಈ ಪ್ರಕರಣದಲ್ಲಿ ಸದರಿ ಮನವಿದಾರರು ನೀಡಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದ ತರುವಾಯ ಸದರಿ ಸ್ಥಳವನ್ನು ಉಚಿತವಾಗಿ ಸರ್ಕಾರದವರು ಈ ಹಿಂದೆ ಮಂಜೂರು ಮಾಡಿದ್ದು, ಧಾರ್ಮಿಕ ಉತ್ತಮ ಕಾರ್ಯಚಟುವಟಿಗೆಳಿಗೆ ಮಾತ್ರ ಉಪಯೋಗಿಸುತ್ತಿರುವುದು ಕಂಡು ಬಂದಿರುವ ಹಿನ್ನಲೆಯಲ್ಲಿ ದಿನಾಂಕ: 01–04–1995 ರಿಂದ ಜಾರಿಗೆ ಬರುವಂತೆ ತೆರಿಗೆ ವಿನಾಯ್ತಿ ನೀಡಲು ಸಮಿತಿಯು ತೀರ್ಮಾನಿಸಲಾಗಿರುತ್ತದೆ. ಶ್ರೀಮಾನ್ ಮಾದ್ವಸಂಘ ರವರು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ wpno 44275/2011 (LB-BMP) ರವರು ಮಾನ್ಯ ಆಯುಕ್ತರು ಮತ್ತು ಸಹ ಕಂದಾಯ ಅಧಿಕಾರಿರವರ ವಿರುದ್ದ ಪ್ರಕರಣ ದಾಖಲಾಗಿದ್ದು, ಈ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು 2ನೇ ಪ್ರತಿವಾದಿಯು ಆಸ್ತಿ ತೆರಿಗೆಯನ್ನು ವಸೂಲಿ ಮಾಡಬಾರದೆಂದು ಆದೇಶ ನೀಡಲಾಗಿರುತ್ತದೆ.

ಮೇಲ್ಮನವಿ ಸ್ಥಾಯಿ ಸಮಿತಿಯ ದಿನಾಂಕ:26–06–2003ರ ಅನ್ವಯ ಆಸ್ತಿ ತೆರಿಗೆ ವಿನಾಯ್ತಿ ನೀಡಲು ಮನ್ನಾಮಾಡಲು ಸಮಿತಿಯ ತೀರ್ಮಾನ ನೀಡಲಾಗಿರುವ ಹಿನ್ನಲೆಯಲ್ಲಿ ಸ್ಥಳ ಪರಿಶೀಲನೆ ಮಾಡಲಾಗಿ ಸದರಿ ಸ್ವತ್ತಿನ ಅಳತೆ 14337 ಚದರ

ಅಡಿಗಳಿದ್ದು ಇದರಲ್ಲಿ 270 ಚ.ಅಗಳನ್ನು ಕ್ರೆಡಿಟ್ ಕೋ ಅಪರೇಟಿವ್ ಸೋಸೈಟಿಗೆ ಬಾಡಿಗೆಗೆ ನೀಡುತ್ತಿರುತ್ತಾರೆ 2) ಕಲ್ಯಾಣ ಮಂಟಪ 900 ಚದರಡಿಗಳ ಭಾಗವನ್ನು ಸಾರ್ವಜನಿಕರಿಗೆ ಬಾಡಿಗೆಗೆ ನೀಡುತ್ತಿರುತ್ತಾರೆ 3) ಹಾಗೂ ಸೌಂಡ್ ಸಿಸ್ಟಂ ರವರಿಗೆ 1035 ಚದರಡಿಗಳ ಭಾಗವನ್ನು ಸಹ ಬಾಡಿಗೆಗೆ ನೀಡಲಾಗಿರುತ್ತದೆ.

ದಿನಾಂಕ28-12-2011ರಲ್ಲಿ ಶ್ರೀಮಾನ್ ಮಾಧ್ವ ಸಂಘರವರು ಸಹ ಕಂದಾಯ ಅಧಿಕಾರಿ ಕೆಂಪೇಗೌಡನಗರ ರವರಿಗೆ ಅರ್ಜಿ ಸಲ್ಲಿಸಿ ಕರ್ನಾಟಕ ಉಚ್ಛನ್ಯಾಯಾಲಯದ ಪ್ರಕರಣ ಸಂಖ್ಯೆ wpno 44275/2011ರ ಪ್ರಕರಣದಲ್ಲಿ ಆದೇಶಿಸಿರುವಂತೆ ಸಿವಿಲ್ ನ್ಯಾಯಾಲಯದಲ್ಲಿ ಈ ಹಿಂದೆ ದಾವೆ ಸಂಖ್ಯೆ ಎಂ.ಎ.ನಂ.29/1988 ರ ಪ್ರಕರಣ ರ ಆದೇಶ ಹಾಗೂ ತೆರಿಗೆ ಮೇಲ್ಮನವಿ ಸ್ಥಾಯಿ ಸಮಿತಿಯ ತೆರಿಗೆ ವಿಷಯಗಳಿಗೆ ಸಂಬಂಧಪಟ್ಟಂತೆ ಸಭೆಯ ನಡವಳಿಗಳನ್ನು ಹಾಜರುಪಡಿಸಿ wpno 44275/2011ರಲ್ಲಿ ಆದೇಶಿಸಿರುವ ಅನ್ವಯ ಆಸ್ತಿ ತೆರಿಗೆಯನ್ನು ವಿನಾಯ್ತಿಗೊಳಿಸಲು ಕೋರಿಕೊಂಡಿರುವ ಹಿನ್ನಲೆಯಲ್ಲಿ ಈ ಹಿಂದೆ ಕಂದಾಯ ನಿಗಧಿಪಡಿಸಿರುವ ವಸತಿಯೇತರ ವಾರ್ಷಿಕ ಮೌಲ್ಯ ರೂ 98000 ರಿಂದ 125000ಗಳಿಗೆ ದಿನಾಂಕ:01-01-1995 ರಿಂದ ಜಾರಿಗೊಳಿಸಿರುವ ಕಂದಾಯವನ್ನು ವಿನಾಯಿತಿಗೊಳಿಸುವ ಬಗ್ಗೆ ಅಪೀಲು ಸ್ಥಾಯಿಸಮಿತಿ ಮುಂದೆ ತೀರ್ಮಾನಕ್ಕಾಗಿ ಮಂಡಿಸಲಾದ ಟಿಪ್ಪಣಿ

ಪ್ರಕರಣವನ್ನು ಕರೆಯಲಾಯಿತು ಮನವಿದಾರರ ಪರವಾಗಿ ಅವರ ನ್ಯಾಯವಾದಿಗಳು ಹಾಜರಿದ್ದು ಪ್ರಸ್ತುತ ಈ ಜಾಗವನ್ನು ಮೈಸೂರಿನ ಮಹಾರಾಜರು ನೀಡಿದಾಗಿದ್ದು ಇದಕ್ಕೆ ಹೊಂದುಕೊಂಡಂತಿರುವ ಮಹಾನಗರ ಪಾಲಿಕೆ ಸ್ವತ್ತಿಗೆ ತೆರಿಗೆ ವಿನಾಯಿತಿ ನೀಡಿದ್ದು ಅನಂತರದಲ್ಲಿ ಸದರಿ ಸ್ವತ್ತಿಗೆ ಕಂದಾಯವನ್ನು ನಿಗದಿ ಪಡಿಸಿದ್ದು ಮನವಿ ಮೇರೆಗೆ ಕಂದಾಯವನ್ನು ವಿನಾಯಿತಿ ನೀಡಲಾಗಿರುತ್ತದೆ. ಮನವಿದಾರರ ಮನವಿಯನ್ನು ಪುರಸ್ಕರಿಸುತ್ತಾ ವಿಷಯವನ್ನು ಮೇಲ್ಮನವಿ ಪ್ರಾಧಿಕಾರ ರವರಿಗೆ ವರ್ಗಾಯಿಸುತ್ತಾ ಇದರಲ್ಲಿ ತೆರಿಗೆ ವಿನಾಯಿತಿಯನ್ನು ನೀಡುವುದಕ್ಕೆ ಸಂಬಂಧಿಸಿದಂತೆ ವಾದಗಳನ್ನು ದಾಖಲಿಸಲಾಗಿದ್ದು ಆದೇಶಕ್ಕಾಗಿ ಕಾಯ್ದಿರಿಸಿದೆ.

**ವಿಷಯ:ಸಂಖ್ಯೆ:ಅಸ್ಥಾಸ/(ಕಂ)/07/2013-14** ಆಯುಕ್ತರವರ ಟಿಪ್ಪಣಿ ದಿನಾಂಕ:3-8-2013ರ ರೀತ್ಯಾ ಸ್ವತ್ತಿನ ಸಂಖ್ಯೆ:262,263 3ನೇ ಮುಖ್ಯರಸ್ತೆ, 3ನೇ ಫೇಸ್,ಪೀಣ್ಯ ಕೈಗಾರಿಕಾ ಪ್ರದೇಶ ವಾ.ಸಂಖ್ಯೆ:41 ಈ ಸ್ವತ್ತಿನ ಖಾತೆದಾರರಾದ ಮೆ:ಸಿಂಥೆಟಿಕ್ ಫ್ಯಾಕರ್ಸ್ ಪ್ರೈ.ಲಿ.ರವರು ಪ್ರಥಮ ಅಪೀಲು ಅಧಿಕಾರಿಯವರ ಅಪೀಲು ತೀರ್ಮಾನದ ವಿರುದ್ದ ಮಾನ್ಯ ಜಂಟಿ ಆಯುಕ್ತರು ರವರಿಗೆ ಅರ್ಜಿಯನ್ನು ಸಲ್ಲಿಸಿ2008-09 ಮತ್ತು2009-10ನೇ ಸಾಲಿನ ಕಂದಾಯವನ್ನು ಸಣ್ಣ ಕೈಗಾರಿಕೆ ದರದಲ್ಲಿ ನಿಗಧಿಪಡಿಸಿಕೊಡಲು ಕೋರಿರುತ್ತಾರೆ.

ಈ ಮೇಲ್ಕಂಡ ಸ್ವತ್ತಿಗೆ ಉಪ ಆಯುಕ್ತರು(ಕಂದಾಯ)ರವರ ಪತ್ರ ಸಂಖ್ಯೆ:ಉ.ಅ/ಕಂ/ಪಿಆರ್/799/2011-12 ದಿನಾಂಕ: 14-6-2011ರ ಆದೇಶದಂತೆ ಉಪ ಆಯುಕ್ತರು(ರಾಜರಾಜೇಶ್ವರಿನಗರ) ವಲಯ ರವರು ಕಂದಾಯ ಪರಿಷ್ಕರಣೆಯನ್ನು ಮಾಡಿ ವಾರ್ಷಿಕ ತೆರಿಗೆ (ಉಪಕರಗಳು ಸೇರಿ)ರೂ.3,08,183/-ಗಳಿಗೆ ದಿನಾಂಕ:1-4-2008 ರಿಂದ ಸ್ವಂತ ಆಧಾರದ ಮೇಲೆ ಕಟ್ಟಡವು ಸುಮಾರು 41550 ಚ.ಅಡಿಗಳ ಕಟ್ಟಡವಿದ್ದು, ಮಧ್ಯಮ ವರ್ಗದ ಕೈಗಾರಿಕೆ ದರದಂತೆ ವಸತಿಯೇತರ ರೂ.3.25 ಪೈಸೆ ಮತ್ತು ರೂ.1,625 ಪೈಸೆಯಂತೆ ಲೆಕ್ಕಚಾರ ಮಾಡಿ ಪರಿಷ್ಕರಿಸಿ ನಿಗಧಿಪಡಿಸಲಾಗಿರುತ್ತದೆ. ಈ ಕಂದಾಯ ಪರಿಷ್ಕರಣೆಯ ವಿರುದ್ದ ಖಾತೆದಾರರು ಪ್ರಥಮ ಅಪೀಲು ಅಧಿಕಾರಿಗಳಿಗೆ ಮನವಿಯೊಂದನ್ನು ನೀಡಿ ಕಂದಾಯವನ್ನು ಕಡಿಮೆ ಮಾಡುವಂತೆ ಕೋರಿದ್ದು, ಈ ಮನವಿಯನ್ನು ಪ್ರಥಮ ಅಪೀಲು ಅಧಿಕಾರಿಗಳು ವಿಚಾರಣೆ ನಡೆಸಿ 35091 ಚ.ಅಡಿಗಳ ಸ್ವತ್ತಿಗೆ ಮಧ್ಯಮ ಕೈಗಾರಿಕೆಯೆಂದು ವಾರ್ಷಿಕ ತೆರಿಗೆ (ಉಪಕರಗಳು ಸೇರಿ) ರೂ.2,55,725/-(ವಸತಿಯೇತರ)ಗಳಿಗೆ ದಿನಾಂಕ: 1-4-2008ರಿಂದ ನಿಗಧಿಪಡಿಸಿರುತ್ತಾರೆ.

ಪ್ರಕರಣವನ್ನು ಕರೆಯಲಾಯಿತು ಮನವಿದಾರರು ಗೈರುಹಾಜರಾಗಿದ್ದು ಪ್ರತಿವಾದಿ ಹಾಜರಾಗಿದ್ದು ಪ್ರಕರಣವನ್ನು ಮುಂದೂಡಿದೆ.

**(ಆರ್ ಚಂದ್ರಶೇಖರಯ್ಯ.)**
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ